ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೨ ಮಾರ್ಚ್, ೨೦೦೨ ಸಂಚಿಕೆ ೮

ಹಿಂದುಗಳೇ, ಮುಸ್ಲಿಂರೇ
ಈ ನರಮೇಧ ನಿಲ್ಲಿಸಿ.
ಮೊದಲು ಮಾನವೀಯತೆ.
ತದನಂತರ ಮಂದಿರ್ - ಮಸ್ಜಿದ್

★

ಪಂಚಾಯತ್ ರಾಜ್ಯದ ಹಿತ ಶತ್ರುಗಳು

ಸಾಯುತ್ತಿರುವ ಭಾಷೆಗಳನ್ನು ಉಳಿಸುವುದು ಹೇಗೆ?

ನಮ್ಮ ಸಮಕಾಲೀನ ನಾಯಕ : ಅನಿಲ ಅಗ್ರವಾಲ್

ಗಾಂಧೀ ಮತ್ತು ಇಂದಿನ ಭಾರತೀಯ ಆರ್ಥಿಕ ಸ್ಥಿತಿ

ಪಂಚಾಯತ್ ಪ್ರತಿನಿಧಿಗಳ ರಾಷ್ಟ್ರೀಯ ಸಮ್ಮೇಳನದ ಘೋಷಣಾ ಪತ್ರ

ಅಖಿಲ ಭಾರತ ೬೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೨   ಸಂಚಿಕೆ : ೮

ಮಾರ್ಚ್ . ೨೦೦೨

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-

ಅರ್ಧವಾರ್ಷಿಕ : ರೂ. ೫೦/-

ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ್ (ರಿ.)

ಕಲ್ಯಾಣಿ ಬೀದಿ,

ಮೇಲುಕೋಟೆ

ಜಿಲ್ಲಾ : ಮಂಡ್ಯ. ೫೭೧ ೪೩೧.

ದೂರವಾಣಿ:೦೮೨೩೬ ೬೮೭೫೪

ಕಳೆದ ಹತ್ತು ವರ್ಷಗಳು
ಎಲ್ಲವನ್ನೂ ಅಲ್ಲಾಡಿಸಿರುವುದು ಮಾತ್ರನಿಜ
ಕ್ರಾಂತಿಯ ಕಹಳೆ ಕಾರ್ಮಿಕನ ತುಟಿ ತೊರೆದು
ನಿರ್ವಾಹಕನ ಮೇಜು ಮೇಲೆ ಬಿದ್ದಿದೆ
ಸರ್ವಾಧಿಕಾರಿಯ ಚಣ್ಣ ತನ್ನಪ್ಪಕ್ಕೆ
ಕೆಳಗೆ ಜಾರಿ ಬಿದ್ದು
ಎಲ್ಲೆಲ್ಲೂ ಗುಲ್ಲೆದ್ದಿದೆ.

ಕಾರ್ಖಾನೆಗಳು ಉಗುಳುವ ಹೊಗೆ
ಪೆಟ್ರೋಲ್‌ನ ಅವಾಂತರಗಳು
ತಿಂದೆಸೆವ ಸ್ವಾರ್ಥಿಗಳ ದಂಥೆ
ಹಾಸ್ಯಾಸ್ಪದವಾಗಿ ಕಾಣುತ್ತಿವೆ.

ಮಾರ್ಕ್ಸ್ ಮತ್ತು ಎಂಗಲ್ಸ್‌ಗಳು
ಎಪ್ಪತ್ತನೆ ಸುತ್ತಿನ ಬಾಕ್ಸಿಂಗ್‌ನಲ್ಲಿ
ಇಕ್ಕಿಸಿಕೊಂಡು
ಮೂಲೆಯಲ್ಲಿ ಮುಖ ಮರೆಸಿಕೊಂಡು
ಮೌನ ತಾಳಿದ್ದಾರೆ.

ಸಮತಾವಾದದ ಗೋಡೆಗೆ ಹೊಡೆದು
ಚೆಂಡು ಪುಟಿಸುತ್ತಿದ್ದ ಪುಡಾರಿಗಳು,
ಸಮತಾ ಹುಡುಗಿಯರ ಗುಗ್ಗುತನದ
ಮುನ್ನೆಲೆಯಲ್ಲಿ ಕುಣಿಯುತ್ತಿದ್ದ
ಅಮೇರಿಕನ್ ಜಾರಿಣಿಯರು
ತಮ್ಮ ಆಟಗಳಿಗೆ ರಂಗ ಹುಡುಕಿಕೊಳ್ಳ
ಬೇಕಾಗಿದೆ, ಕಾರಣ ಕಂಡುಕೊಳ್ಳಬೇಕಾಗಿದೆ.

ಮಾತುಗಳಿಂದ ಹಿಡಿದು ಮನಸ್ಸನ್ನೊಳ
ಗೊಂಡ ಬೆಟ್ಟ, ಬಯಲು, ಸಮುದ್ರದ
ಅಲೆಗಳಿಗೆ ಹೊಸ ಸ್ಪಂದನವೊಂದು
ಹೊಮ್ಮುತ್ತಿದೆ.

ಈ ನಡುವೆ ಕುರ್ಚಿಯನ್ನ ಬಳಸಿದವರು
ಚಿಂತಿಸಿದ್ದು ಮತ್ತು ಮಾಡಿದ್ದು
ಮನುಕುಲದ ದುಗುಡವ
ಹೆಚ್ಚಿಸಿತೆಂಬದು ನನ್ನ ನಮ್ರ ಊಹೆ.

-- ಪಿ. ಲಂಕೇಶ್

ವಿಚಾರ ದೀಪ್ತಿ.....................

ಬದುಕಿನಲ್ಲಿ ಮನುಷ್ಯ ಕಟ್ಟುವ ತರಾವರಿ ವೇಷಗಳಿಗೆಲ್ಲ ಹಸಿವೆಂಬ ಪ್ರವೃತ್ತಿಯೆ ಮೂಲ. ಈ ಸರಳ ಸತ್ಯವನ್ನು ಕನಕದಾಸರು ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ, ತುತ್ತು ಹಿಟ್ಟಿಗಾಗಿ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ದೇವನೂರು ಮಹಾದೇವ ಅವರು ಬರೆದ 'ಒಡಲಾಳ' ಕತೆ ಹಸಿವೆಂಬ ಬೆಂಕಿಯ ಸುಡುಶಕ್ತಿಗೆ ಒಂದು ಮಾರ್ಮಿಕ ನಿದರ್ಶನವಾಗಿದೆ.

ಹಸಿವು ಮನುಷ್ಯನನ್ನು ದುಡಿಮೆಗೆ ಹಚ್ಚುತ್ತದೆ. ಕಷ್ಟದ ಬೆಟ್ಟಗಳನ್ನು ಕಡಿದು ಹಾಕಿ ನಗರಗಳ ನಾಗರಿಕತೆಯನ್ನು ಕಟ್ಟುವಂತೆ ಮಾಡುತ್ತದೆ. ಬೇಕು ಬೇಕಾದ ಭೋಗ ಸಾಮಗ್ರಿಗಳನ್ನು ತಯಾರಿಸುವಂತೆ ಮಾಡುತ್ತದೆ. ಹೊಟ್ಟೆಯಲ್ಲಿ ಹಸಿವು ಇರುವುದರಿಂದಲೆ ಕೈಗಳಿಗೆ ಕೆಲಸ ಕಲಿಯುವ ಇರಾದೆ. ಇದೇ ಎಲ್ಲಾ ಬಗೆಯ ಉತ್ಪಾದನೆಗೂ ಮೂಲ. ಗುಟ್ಟರಿತ ಉಳ್ಳವರು ಬಡವರ ಶಕ್ತಿ ಬಳಸಿಕೊಂಡು ಅವರ ಉತ್ಪಾದನೆಗೆ ತಾವೇ ಒಡೆಯರಾಗುತ್ತಾರೆ. ಈ ಉಳ್ಳವರ ಹೊಟ್ಟೆ ಹಸಿವು, ಮೆಲ್ಲಗೆ ಹಣದ ಹಸಿವು. ಆಸ್ತಿಯ ಹಸಿವು. ಅಧಿಕಾರದ ಹಸಿವಾಗಿ ಹೆಡೆಯೆತ್ತುತ್ತದೆ. ಉಳ್ಳವರ ಈ ಅನೈತಿಕ ಹಸಿವನ್ನು ಕೊನೆಗಾಣಿಸಿದಾಗಲೆ ಎಲ್ಲ ಬಡವರ, ದುಡಿಮೆಗಾರರ ಹಸಿವು ನಿಜವಾಗಿ ಹಿಂಗಲು ಸಾಧ್ಯ ಎಂಬ ವಿಚಾರ ಮಾರ್ಕ್ಸ್‌ವಾದವಾಗಿ ಬೆಳೆದಿದೆ.

ಹಸಿದ ಬಡವರು ಸುಮ್ಮನೆ ಕೂರುವುದಿಲ್ಲ. ಸಂಘಟಿತರಾಗುತ್ತಾರೆ, ಹೋರಾಡುತ್ತಾರೆ. ಹಸಿವು ಹಿಂಗಿಸಿಕೊಳ್ಳುವ ಹಕ್ಕು ಎಲ್ಲರಿಗೂ ಇದೆ ಎಂದು ಸಾಬೀತು ಮಾಡುತ್ತಾರೆ. ಫ್ರಾನ್ಸಿನ ಮಹಾಕ್ರಾಂತಿ ಇಡೀ ಪ್ರಪಂಚಕ್ಕೆ ಹಸಿವಿನ ಮೂಲಪಾಠ ಹೇಳಿ ಕೊಟ್ಟಿದೆ.

ಬಗೆಬಗೆಯಾಗಿ ನಮ್ಮೆಲ್ಲರನ್ನು ಬಗೆಯುತ್ತಿರುವ ಹಸಿವಿನ ಆವಿಷ್ಕಾರಗಳು ಒಂದಲ್ಲ ಎರಡಲ್ಲ. ನಮ್ಮ ಪ್ರವೃತ್ತಿಗಳನ್ನು ಮತ್ತು ಆಸೆಗಳನ್ನು ವಿವಿಧ ಹಸಿವುಗಳಿಂದ ಗುರುತಿಸಬಹುದು. ಈ ಎಲ್ಲ ಹಸಿವುಗಳಲ್ಲಿ ಮುಖ್ಯವಾದವು ಮೂರು : ಹೊಟ್ಟೆ ಹಸಿವು, ಮೈ ಹಸಿವು ಮತ್ತು ಮನಸ್ಸಿನ ಹಸಿವು. ಈ ಮೂರು ಹಸಿವುಗಳ ತ್ರಿಶೂಲವನ್ನು ಮನುಷ್ಯನೊಳಗೆ ನೆಟ್ಟು ನಗುತ್ತದೆ ಸೃಷ್ಟಿ.

– ಬಿದರಹಳ್ಳಿ ನರಸಿಂಹಮೂರ್ತಿ

ಬಮಿಯಾನ್ ಬುದ್ಧ ಮತ್ತು ಅಫ್ಘಾನ್ ಯುದ್ಧ

ಅಲ್ಲಿ ಮತಾಂಧರ ಕ್ರೂರನೋಟಕ್ಕೆ. ಮದ್ದಿನ ಸ್ಫೋಟಕ್ಕೆ
ನಗುನಗುತ್ತಲೇ ಪುಡಿಪುಡಿಯಾಗಿ ಬಿದ್ದ, ಜನಮನದಲ್ಲಿ ಎದ್ದ.

ನೆಲದಲ್ಲಿ ತಾಲಿಬಾನ್ ದ್ವೇಷ, ಬಾನಲ್ಲಿ ಅಮೇರಿಕನ್ ರೋಷ.
ಯುದ್ಧಕ್ಕೆ ಮೊದಲೇ ಮಣ್ಣಾಗಿ ಬಂದ ಬಮಿಯಾನ್ ಬುದ್ಧ.

ಆಗಬಹುದು ಅದೆಷ್ಟೋ ಸಲ ಈ ಭುವಿಯ ಮೇಲೆ ಯುದ್ಧ;
ಅಂತಃಕರಣದಲ್ಲಿ ಅಮರನಾಗಿ ಸದಾ ನಿಂತೇ ಇರುತ್ತಾನೆ ಬುದ್ಧ.

ಕೇಳಿ, ಬುದ್ಧನಲ್ಲಿ ಸೋಲೆಂಬುದಿಲ್ಲ; ಯುದ್ಧದಲ್ಲಿ ಗೆಲುವಿಲ್ಲ.
ಬಮಿಯಾನದ ಭಗವಾನ ಮತ್ತೆ ಮಣ್ಣಲ್ಲಿ ಹೂವಾಗಿ ಅರಳಿದನಲ್ಲ!

ಎಲ್ಲ ತೊರೆದಿದ್ದ ಬುದ್ಧ, ಸುವಾಸನೆಯಾಗಿ ವಾಸವಾದ ಮನದಲ್ಲೆ.
ಅಫ್ಘಾನ್ ವೃದ್ಧನೊಬ್ಬ ಅರಿಯದೆ ಸಾಗಿದ್ದ ಬುದ್ಧನ ದಾರಿಯಲ್ಲೇ!
ಕೇಳಿದವರಿಗೆ ಮಾತ್ರ ಹೇಳಿದ: ಲಾದೆನ್ ಬೇಡ, ಬುಷ್ ಬೇಡ,
ಭಯೋತ್ಪಾದಕರೂ ಬೇಡ, ಯುದ್ಧೋತ್ಪಾದಕರೂ ಬೇಡ.

ನನಗೆ ಬೇಕು ಶಾಂತಿ, ಲೋಕದ ಜೀವಿಗಳಿಗೆಲ್ಲ ಬೇಕು ಶಾಂತಿ.
ವಿಶ್ವದೆಲ್ಲಡೆಯ ಒಳ್ಳೆಯದೆಲ್ಲರ ಸೃಷ್ಟಿಗೆ ಮೂಲ ಕೇವಲ ಶಾಂತಿ.
ಶಾಂತಿ ಆವರಿಸಿದಾಗ ಹೂಗಳರಳುವವು, ಕಾಯಿ ಹಣ್ಣಾಗುವವು;
ಹಿಮಶಿಖರದ ಹಿಂದೂಖುಷ್ ಪರ್ವತಗಳೆಲ್ಲ ಮಂದಹಾಸ ಬೀರುವವು
ಶಾಂತಿ ಎದ್ದು ನಿಂತಾಗ ನಾವು ಹಾಯಾಗಿ ಕುಳಿತು ಉಣಬಹುದು;
ಹಾಲುಗಲ್ಲದ ಹಸುಗೂಸಿನ ನಗೆಯ ವಿಸ್ತಾರವನ್ನು ಅಳೆಯಬಹುದು.

ಶಾಂತಿ ಇದ್ದಾಗ ನಾವು ಅಲೆಯಬೇಕಿಲ್ಲ, ಹೊಸ ನೆಲೆಯೂ ಬೇಕಿಲ್ಲ;
ಶಾಂತಿ ಎಲ್ಲವನ್ನೂ ತರುವುದು, ಯುದ್ಧದಲ್ಲಿ ಯಾರಿಗೂ ಸುಖವಿಲ್ಲ.

ಬಾಂಬಿಗೆ ಭಯವಿದೆ ಶಾಂತಿಯ ಮುಂದೆ ಸಿಡಿಯಲು. ಜೀವ ಹಿಡಿಯಲು.
ಏಳಬೇಕಿಲ್ಲ ನಿರಾಶ್ರಿತರ ತಾಣಗಳು; ಅವಕಾಶವಿಲ್ಲ ಮನೆಗಳ ಬೀಳಿಸಲು.

ನಾವು ಬದುಕ ಬಯಸಿದ್ದೇವೆ ನೆನಪುಗಳೊಂದಿಗೆ, ಸುಖದುಃಖಗಳೊಂದಿಗೆ;
ಹಾಡುವ ಹಕ್ಕಿಗಳೊಂದಿಗೆ. ಭೂಮಿಯೊಂದಿಗೆ - ಜೀವಕಾಮಿಯೊಂದಿಗೆ.

ಎಲ್ಲೆಡೆ ಶಾಂತಿ ನೆಲೆಸಲಿ, ಕಳೆಯಲಿ ಕತ್ತಲೆ ಭೂಮಿಯಲ್ಲೂ ಅಕಾಶದಲ್ಲೂ;
ಸೂರ್ಯಚಂದ್ರರು ಒಂದಾಗಿ ಬೆಳಗುತ್ತಿರಲಿ ಸದಾ ನಮ್ಮ ಮನದಲ್ಲೂ.

– ರಂಜಾನ್ ದರ್ಗಾ

'ಸುಧಾ' ಸಭಾರ

ಪಂಚಾಯತ್ ರಾಜ್ಯದ ಹಿತಶತ್ರುಗಳು

– ಜಾರ್ಜ್‌ಮ್ಯಾಥ್ಯೂ

ಪಂಚಾಯತ್ ರಾಜ್ಯ ಸಂಸ್ಥೆಗಳು ಯಾವ ಘನತೆ ಮತ್ತು ಜನರ ಆಶೋತ್ತರಗಳಿಗೆ ಸ್ಪಂಧಿಸುವಂಥ ಸಂಸ್ಥೆಗಳು ಆಗಬೇಕಾಗಿದ್ದವೋ ಆ ಒಂದು ಗೌರವಯುತ ಸ್ಥಾನವನ್ನು ಅವು ಪಡೆಯಲು ಸಾಧ್ಯವಾಗದೇ ಇರುವುದಕ್ಕೆ ಅನೇಕ ಕಾರಣಗಳಿವೆ:– ಅವುಗಳಲ್ಲಿ, ನಿಯಮಿತವಾಗಿ ಚುನಾವಣೆ ಆಗದೇ ಇರುವುದು; ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರನ್ನು ಮತ್ತು ಹೆಣ್ಣುಮಕ್ಕಳನ್ನು ದೀರ್ಘ ಕಾಲದಿಂದ ತುಳಿದಿರುವುದು; ಹಾಗೂ ಅಗತ್ಯವಾಗಿರುವಷ್ಟು ಅಧಿಕಾರವನ್ನು ಈ ಸಂಸ್ಥೆಗಳಿಗೆ ಹಸ್ತಾಂತರಗೊಳಿಸದೇ ಇರುವುದು; ಮತ್ತು ಹಣಕಾಸಿನ ಸಂಪನ್ಮೂಲಗಳ ಅಭಾವ. ಇತ್ಯಾದಿನ್ಯೂನ್ಯತೆಗಳ ಕಾರಣದಿಂದಾಗಿ ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿ ಖಚಿತತೆ, ನಿರಂತರತೆ ಮತ್ತು ಸಾಮರ್ಥ್ಯದಂಥ ಕೆಲ ಮೂಲಭೂತ ಹಾಗೂ ಅಗತ್ಯವಾದ ಗುಣಲಕ್ಷಣಗಳನ್ನು ಪಂಚಾಯತ್‌ಗಳಲ್ಲಿ ಅಳವಡಿಸುವುದು ಅತ್ಯಗತ್ಯವಾಗಿದೆ ಎಂದು ಭಾವಿಸಲಾಗಿದೆ. ೧೯೯೧ ಸೆಪ್ಟೆಂಬರ್ ತಿಂಗಳಲ್ಲಿ ಸಂವಿಧಾನದ ೭೨ನೇ ತಿದ್ದುಪಡಿಯನ್ನು ಮಂಡಿಸುವಾಗ ಗ್ರಾಮೀಣ ಅಭಿವೃದ್ಧಿ ಮಂತ್ರಿಯವರಾದ ಜಿ. ವೆಂಕಟಸ್ವಾಮಿಯವರು ಹೇಳಿದ ಮಾತುಗಳು ಈ ರೀತಿ ಇವೆ:–೧೯೯೨ ಡಿಸೆಂಬರ್ ೨೨ ಮತ್ತು ೨೩ ನೇ ದಿನಾಂಕಗಳಲ್ಲಿ ಲೋಕಸಭೆ ಮತ್ತು ರಾಜ್ಯ ಸಭೆ ಆ ಕರಡನ್ನು ೭೩ನೇ ಸಂವಿಧಾನ ತಿದ್ದುಪಡಿ ಕಾಯಿದೆಯೆಂದು ಅಂಗೀಕರಿಸಿದವು ಮತ್ತು ಆನಂತರ ಕೆಲವೇ ತಿಂಗಳುಗಳಲ್ಲಿ ಸಂವಿಧಾನದಲ್ಲಿ ಆ ಮೂಲಭೂತ ಮತ್ತು ಅತ್ಯಗತ್ಯವಾದ ಗುಣಲಕ್ಷಣಗಳನ್ನು ಪ್ರತಿಷ್ಠಾಪಿಸಲಾಯಿತು. ಆದರೆ ಆ ಸುಪ್ರಸಿದ್ಧ ಮಾತುಗಳೂ, ಸಂವಿಧಾನದ ೭೩ನೇ ತಿದ್ದುಪಡಿಯೂ ಸರ್ವಾನುಮತದಿಂದ ಅಂಗೀಕಾರವಾಗಿ ಹತ್ತು ವರ್ಷಗಳೇ ಆದವು. ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿ ಖಚಿತತೆ, ನಿರಂತರತೆ ಮತ್ತು ಸಾಮರ್ಥ್ಯದಂಥ ಮೂಲಭೂತ ಹಾಗೂ ಅಗತ್ಯವುಳ್ಳ ಗುಣಲಕ್ಷಣಗಳು ಜಾರಿಗೆ ಬಂದಿವೆಯೆ ಎಂಬ ಅಂಶವನ್ನು ಚರ್ಚಿಸುವುದಕ್ಕಾಗಿ ಕಳೆದ ೨೦೦೧ ಡಿಸೆಂಬರ್ ೨೨ ಮತ್ತು ೨೩ನೇ ತಾರೀಖುಗಳಲ್ಲಿ ಹೊಸ ದಿಲ್ಲಿಯಲ್ಲಿ ೧೫೦೦ ಚುನಾಯಿತ ಪಂಚಾಯತ್ ಪ್ರತಿನಿಧಿಗಳ ಸಮ್ಮೇಳನ ನಡೆಯಿತು. ಸಂವಿಧಾನದ ೭೩ನೇ ತಿದ್ದುಪಡಿಯಾದನಂತರ ಅಖಿಲ ಭಾರತ ಮಟ್ಟದಲ್ಲಿ ಇಂಥ ಒಂದು ಸಮ್ಮೇಳನ ಮೊದಲ ಬಾರಿಗೆ ನಡೆಯಿತು. ಈ ಸಭೆಯು ಅನೇಕ ಕಾರಣಗಳಿಂದಾಗಿ ಅಸಾಧಾರಣವೆನಿಸಿದೆ. ಈ ಐತಿಹಾಸಿಕ ಸಮ್ಮೇಳನಕ್ಕೆ ಎಲ್ಲ ರಾಜ್ಯಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಈ ಒಂದು ಸಂದರ್ಭವು ಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ ಮಾತ್ರವಲ್ಲ ಆಡಳಿತದ ಮೂರನೆ ಹಂತದಲ್ಲಿ

ರುವ ಚುನಾಯಿತ್ ಪ್ರತಿನಿಧಿಗಳು ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ಮತ್ತು ತಮ್ಮ ಹಕ್ಕುಗಳು ಹಾಗು ಜವಾಬ್ದಾರಿಗಳನ್ನು ಕುರಿತು ಆ ಆಲೋಚಿಸುವ ಸಂದರ್ಭವೂ ಆಗಿತ್ತು. ಪ್ರತಿಯೊಂದು ರಾಜ್ಯದಲ್ಲಿ ಇಂದು ಇರುವ ನೈಜ ಪರಿಸ್ಥಿತಿಯು ಹಿನ್ನೆಲೆಯಲ್ಲಿ ಈ ವಿಷಯಗಳನ್ನು ಪರೀಶೀಲಿಸುವ ಸಂದರ್ಭವೂ ಅದಾಗಿತ್ತು. ಅಲ್ಲದೆ, ಪಂಚಾಯತ್‌ಗಳನ್ನು ಇನ್ನೂ ಹೆಚ್ಚು ಒಲಿಷ್ಠಗೊಳಿಸುವ ಮತ್ತು ಅವು ಗಳನ್ನು ಸ್ವಾನತಾರಹಿತವಾಗಿ ಮಾಡುವುದು ಹೇಗೆ ಎಂಬುದನ್ನು ಚರ್ಚಿಸುವ ಸಂದರ್ಭ ಕೂಡ ಅದಾಗಿತ್ತು. ೯೦ರ ಪ್ರಾರಂಭದ ದಶಕಗಳಿಂದ ಸಾಧಿಸಲ್ಪಟ್ಟಿರುವ ಕೆಲವು ಸಾಧನೆಗಳ ಬಗ್ಗೆ ಸಕಾರಾತ್ಮಕ ಅಭಿಪ್ರಾಯಗಳು ಆ ಸಮ್ಮೇಳನದಲ್ಲಿ ಕೇಳಿಬಂದವಾದರೂ ಪ್ರಜಾಸತ್ತೆಯು ಕೆಳಮಟ್ಟದ ಪ್ರತಿನಿಧಿಗಳ ಈ ಸಮ್ಮೇಳನದಲ್ಲಿ ನಿಷ್ಕ್ರಿಯತೆ ಮತ್ತು ಹತಾಶೆಯ ಧ್ವನಿಯೂ ಸಹ ಕೇಳಿಬಂತು. ಆ ಪಂಚಾಯತ್ ಪ್ರತಿನಿಧಿಗಳ ಬಳಿ ಹಣವಿಲ್ಲ, ಕಾರ್ಯ ಜವಾಬ್ದಾರಿಗಳಿಲ್ಲ, ಹಾಗೂ ಕಾರ್ಯನಿರ್ವಹಿಸುವ ಅಧಿಕಾರಿಗಳಿಲ್ಲ. ಸಂವಿಧಾನವು ಪಂಚಾಯತ್‌ಗಳಿಗೆ ಸ್ಥಳೀಯ ಸರ್ಕಾರಗಳೆಂಬ ಮಾನ್ಯತೆಯನ್ನೇನೋ ಕೊಟ್ಟಿದೆ. ಆದರೆ ಪಂಚಾಯಿತಿ ಗಳು ಆ ಆದರ್ಶದಿಂದ ಬಹಳ ದೂರವಾಗಿಯೇ ಇವೆ. ಈ ಒಂದು ದಯ ನೀಯ ಸ್ಥಿತಿಗೆ ಯಾರು ಹೊಣೆಗಾರರಾಗಿದ್ದಾರೆ ಎಂಬ ಬಗ್ಗೆ ಆತ್ಮವಿಮರ್ಶೆ ಆ ಸಮ್ಮೇಳನದಲ್ಲಿ ನಡೆಯಿತು. ಈ ಪರಿಸ್ಥಿತಿಗೆ ಇಂದಿರುವ ವ್ಯವಸ್ಥೆ ಕಾರಣವೆ ಅಥವಾ ಈ ವ್ಯವಸ್ಥೆಯಲ್ಲಿರುವಂಥ ವ್ಯಕ್ತಿಗಳು ಕಾರಣವೇ ಅಥವಾ ಇಬ್ಬರೂ ಕಾರಣರೇ? ಸಂವಿಧಾನದ ೭೩ನೇ ತಿದ್ದುಪಡಿಯು ಜಾರಿಗೆ ಬರದಂತೆ ಗುಟ್ಟಾಗಿ ಮತ್ತು ಬಹಿರಂಗವಾಗಿ ಪಿತೂರಿ ನಡೆಯುತ್ತಿದೆಯೆಂಬ ಒಂದು ಸಾಮಾನ್ಯ ಅನಿಸಿಕೆ ದೇಶದಾದ್ಯಂತ ಇದೆ. ಸಂವಿಧಾನವು ಗುರುತಿಸಿರುವ ಗುರಿಗಳತ್ತ ಪಂಚಾಯತ್‌ಗಳು ಮುಂದುವರೆಯುತ್ತಾ ಹೋದಂತೆ ಅಧಿಕಾರವನ್ನು ಕಳೆದು ಕೊಳ್ಳುವ ವ್ಯಕ್ತಿಗಳೇ ಪಂಚಾಯಿತಿಗಳ ಶತ್ರುಗಳಾಗುತ್ತಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿರುವ ರಾಜಕಾರಣಿಗಳು ಕ್ರಿಯಾಶೀಲವಾದ ಪ್ರಜಾ ಪ್ರಭುತ್ವದ ಸ್ಥಾಪನೆಗಾಗಿ ಮತ್ತು ಜಿಲ್ಲಾ ಹಂತದಲ್ಲಿ ಶೀಘ್ರ ಅಭಿವೃದ್ಧಿ ಯಾಗುವುದಕ್ಕಾಗಿ ಮತ್ತು ದಕ್ಷ ಆಡಳಿತ ನಡೆಯುವುದಕ್ಕಾಗಿ ಅವರು ಇದು ವರೆಗೆ ಅನುಭವಿಸಿಕೊಂಡು ಬಂದಿರುವ ಅಧಿಕಾರ ಮತ್ತು ಸೌಕರ್ಯಗಳನ್ನು ಬಿಟ್ಟುಕೊಡಲು ಸಿದ್ಧರಿದ್ದಾರೆಯೇ ಮತ್ತು ಗ್ರಾಮೀಣ ಹಂತದಲ್ಲಿ ಜನರ ಪ್ರತಿ ನಿಧಿಗಳ ಶ್ರೇಷ್ಠತೆಯನ್ನು ಅಧಿಕಾರಿಗಳು ಒಪ್ಪಿಕೊಂಡು ಅವರ ಅಧೀನದಲ್ಲಿ ಕೆಲಸ ಮಾಡಲು ಸಿದ್ಧರಿದ್ದಾರೆಯೇ ಮತ್ತು ಅವರೊಂದಿಗೆ ಹೃದಯಪೂರ್ವಕ ವಾಗಿ ಸಹಕರಿಸುವರೆ ಈ ಮುಂತಾದ ಪ್ರಶ್ನೆಗಳು ಕಟು ವಾಸ್ತವಿಕ ಸಂಗತಿಗಳಾ ಗಿವೆ. ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಹೊರ ಹೊಮ್ಮುತ್ತಿರುವ ಜನ

ಶಕ್ತಿಯು ವಿರುದ್ಧ ಭೂ ಮಾಲೀಕರು, ಮೇಲ್ವರ್ಗದ ಜನರು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಕಾನೂನನ್ನೇ ತಮ್ಮ ಕೈಗೆ ತೆಗೆದುಕೊಳ್ಳುತ್ತಿರುವುದು ವಾಸ್ತವ ಸಂಗತಿಯಾಗಿಲ್ಲವೆ? ಸರ್ಕಾರ ಮತ್ತು ಮಂತ್ರಿಗಳು ಪಂಚಾಯತಿಗಳ ಈ ಶತ್ರುಗಳೊಂದಿಗೆ ಶಾಮೀಲಾಗುತ್ತಿದ್ದಾರೆಂದು ಬೇರೆ ಹೇಳಬೇಕಾಗಿಲ್ಲ. ಪಂಚಾಯತ್ ರಾಜ್ ಸಂಸ್ಥೆಗಳ ಬಗ್ಗೆ ರಾಜ್ಯ ಸರ್ಕಾರಗಳು ಹೊಂದಿರುವ ಉದಾಸೀನತೆಯನ್ನು ಕುರಿತು ಬಹಳಷ್ಟು ಬರೆಯಲಾಗಿದೆ. ಒಂದಲ್ಲಒಂದು ಕಾರಣದಿಂದ ಪಂಚಾಯತಿಗಳ ಚುನಾವಣೆಗಳನ್ನು ಮುಂದಕ್ಕೆ ಹಾಕುವುದು ಒಂದು ನಿಯಮಿತ ಅಭ್ಯಾಸವೇ ಆಗಿದೆ. ಇತ್ತೀಚೆಗಷ್ಟೆ ಜಾರ್ಖಂಡ್, ಉತ್ತರಪ್ರದೇಶ ಪಂಜಾಬ್ ಮತ್ತು ಪಾಂಡಿಚೇರಿ. ರಾಜ್ಯಗಳ ಹೊರತಾಗಿ ಉಳಿದ ಕೆಲವು ರಾಜ್ಯಗಳಲ್ಲಿ ಪಂಚಾಯತಿ ಚುನಾವಣೆಗಳಾಗಿವೆ. ದೀರ್ಘಕಾಲದ ಕಾನೂನಿ ಹೋರಾಟ ಮತ್ತು ನಾಗರೀಕರ ಮತ್ತು ಸ್ವಯಂಸೇವಾ ಸಂಸ್ಥೆಗಳ ಮಧ್ಯ ಪ್ರವೇಶದಿಂದಾಗಿ ಕೇರಳ ಮತ್ತು ಕರ್ನಾಟಕದಂಥ ಯಾವ ರಾಜ್ಯಗಳು ಅಧಿಕಾರದ ವಿಕೇಂದ್ರೀಕರಣದ ವಿಷಯದಲ್ಲಿ ಮಹತ್ವದ ಸಾಧನೆಗಳನ್ನು ಮಾಡಿದ್ದವೋ ಅವು ಈಗ ತಡವರಿಸುತ್ತಿವೆ. ನಮ್ಮ ರಾಜಕೀಯ ನಾಯಕತ್ವ ವಿಚಿತ್ರವಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರಗಳನ್ನು ಕೊಡುವ ಸಂದರ್ಭ ಬಂದಾಗ ಅವರು ಬಹಳ ಮಾತನಾಡುತ್ತಾರೆ ಮತ್ತು ಅವು ಸ್ಪಷ್ಟತೆಯಿಂದ ಕೂಡಿದ ದರ್ಪದ ಮಾತಾಗಿರುತ್ತವೆ. ಆದರೆ ಅವರು ಅಧಿಕಾರ ಗ್ರಹಣ ಮಾಡಿದ ಕೂಡಲೇ ಬಣ್ಣವನ್ನು ಬದಲಾಯಿಸುತ್ತಾರೆ. ಇಂಥ ನಾಲಿಗೆತುದಿಯ ಮಾತುಗಳು ಸ್ಥಳೀಯ ಸಂಸ್ಥೆಗಳನ್ನು ನಿಷ್ಕ್ರಿಯಗೊಳಿಸುತ್ತವೆ. ಪಂಚಾಯತಿಗಳ ಹೆಸರಿನಲ್ಲಿ ಮತ್ತು ಅವುಗಳ ಸಂವಿಧಾನಾತ್ಮಕ ಅಧಿಕಾರಗಳ ಬಗ್ಗೆ ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ಮೊಸಳೆಯ ಕಣ್ಣೀರು ಸುರಿಸುತ್ತಿದ್ದಾರೆಂಬುದು ಈಗ ಜನರಿಗೆ ಚೆನ್ನಾಗಿ ಅರ್ಥವಾಗುತ್ತಿದೆ. ಈ ಸಂದರ್ಭದಲ್ಲಿ ತಿದ್ದುಪಡಿಯ ಒಂಬತ್ತನೆ ಭಾಗದ ಪ್ರಯೋಜನವನ್ನು ಪಡೆಯುವುದು ಬಹಳಷ್ಟು ರಾಜ್ಯಗಳಿಗೆ ಅಭ್ಯಾಸವೇ ಆಗಿದೆ. ಈಗ ಕೆಲವು ಉದಾಹರಣೆಗಳನ್ನು ನೋಡೋಣ. ಸಂವಿಧಾನದ ೨೪೩ನೇ ವಿಧಿ (zd)ಯ ಮೇರೆಗೆ ರಾಜ್ಯ ಸರ್ಕಾರಗಳು ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಬೇಕಾಗಿದೆ. ತನ್ಮೂಲಕ ಸಮಗ್ರ ಯೋಜನೆಗಳನ್ನು ತಯಾರಿಸುವುದರ ಮೂಲಕ ವಿಕೇಂದ್ರಿಕೃತ ಯೋಜನೆಗೆ ಚಾಲನೆಯನ್ನು ಕೊಡಬೇಕಾಗಿದೆ. ಈ ವಿಧಿ ಜಾರಿಗೆ ಬಂದು ಒಂಬತ್ತು, ವರ್ಷಗಳೇ ಆದವು. ಆಂಧ್ರಪ್ರದೇಶ. ಅಸ್ಸಾಂ, ಬಿಹಾರ್ ಗೋವಾ ಮತ್ತು ಗುಜರಾತ್ ರಾಜ್ಯಗಳು ಇದುವರೆಗೂ ಜಿಲ್ಲಾ ಯೋಜನಾ ಸಮಿತಿಗಳನ್ನು ಸ್ಥಾಪಿಸಿಯೇ ಇಲ್ಲ. ಅನೇಕ ರಾಜ್ಯಗಳಲ್ಲಿ ಜಿಲ್ಲಾ ಯೋಜನಾ ಸಮಿತಿ

ಗಳ ಅಧ್ಯಕ್ಷತೆಯನ್ನು ರಾಜ್ಯ ಸರ್ಕಾರದ ಪ್ರತಿನಿಧಿಗಳು ವಹಿಸುತ್ತಿದ್ದಾರೆ. ಇದು ಸಂವಿಧಾನದ ೭೩ನೇ ತಿದ್ದುಪಡಿಯ ಆಶಯಕ್ಕೆ ವಿರೋಧವಾಗಿದೆ. ತಮಿಳುನಾಡಿನಲ್ಲಿ ಜಿಲ್ಲಾ ಯೋಜನಾ ಸಮಿತಿಗಳ ರಚನೆಗೆ ಇದುವರೆಗೂ ಆದೇಶವೇ ಹೊರಟಿರುವುದಿಲ್ಲ. ಪಂಚಾಯಿತಿಗಳಿಗೆ ಹಣಕಾಸನ್ನು ಒದಗಿಸುವ ಬಗ್ಗೆ ರಾಜ್ಯಗಳ ಹಣಕಾಸು ಆಯೋಗಗಳು ಸಲ್ಲಿಸಿರುವ ವರದಿಗಳು ಬಗ್ಗೆ ರಾಜ್ಯಗಳು ತಾಳಿರುವ ದಿವ್ಯ ಉದಾಸೀನತೆ ಇನ್ನೊಂದು ಉದಾಹರಣೆಯಾಗಿದೆ. ರಾಜ್ಯ ಸರ್ಕಾರಗಳು ಈ ವರದಿಗಳನ್ನು ಗಂಭೀರವಾಗಿ ಪರಿಗಣಿಸುವುದೇ ಇಲ್ಲ.

ಪಂಚಾಯಿತಿಗಳ ಅಧಿಕಾರವನ್ನು ಮೊಟಕುಗೊಳಿಸುವಂಥ ಸಮಾನಾಂತರ ಸಮಿತಿಗಳನ್ನು ನಿರ್ಮಿಸಿರುವುದು ಇನ್ನೊಂದು ಚಿಂತೆಯ ಸಂಗತಿಯಾಗಿದೆ. ಈ ಸಮಾನಾಂತರ ಸಮಿತಿಗಳನ್ನು ಬಲಪಡಿಸುವ ವಿಷಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಧ್ಯ ಒಂದು ರೀತಿಯ ಪೈಪೋಟಿಯೇ ನಡೆದಿದೆ! ಆಂಧ್ರಪ್ರದೇಶದ ಜನ್ಮಭೂಮಿ ಕಾರ್ಯಕ್ರಮ, ಹರಿಯಾಣದ ಗ್ರಾಮ ವಿಕಾಸ ಸಮಿತಿಗಳು, ಗುಜರಾತಿನ ಜಂಟಿ ಅರಣ್ಯ ನಿರ್ವಹಣಾ ಸಮಿತಿಗಳು, ಹಾಗೂ ರಾಜಸ್ಥಾನದ ಮಳೆ ನೀರು ಸಂವರ್ಧನಾ ಸಮಿತಿಗಳು, ಉತ್ತರಪ್ರದೇಶದ ನೀರು ಬಳಕೆದಾರರ ಸಮಿತಿಗಳು ಹಾಗೂ ರಾಜ್ಯಮಟ್ಟದ ಅನುಷ್ಠಾನ ಸಮಿತಿಗಳು, ಮಧ್ಯ ಪ್ರದೇಶದಲ್ಲಿಯ ಜಿಲ್ಲಾ ಸರ್ಕಾರಗಳು ಈ ಸಂಬಂಧವಾಗಿ ಹೇಳಬಹುದಾದ ಸಮಾನಾಂತರ ಸಮಿತಿಗಳ ಉದಾಹರಣೆಗಳಾಗಿವೆ. ಈ ಎಲ್ಲ ಸಮಿತಿಗಳಿಗೆ ನಾಮಕರಣಗೊಂಡ ಮಂತ್ರಿಗಳ ಹಾಗೂ ಇತರ ಪ್ರಭಾವಿ ಜನರ ಕೈಗಳನ್ನು ಬಲಪಡಿಸುವುದಕ್ಕಾಗಿ ಈ ಸಮಿತಿಗಳಿಗೆ ಯಥೇಚ್ಛವಾಗಿ ಹಣ ಕೊಡಲಾಗುತ್ತಿದೆ. ಆದ್ದರಿಂದ ಜಿಲ್ಲಾಧಿಕಾರಿಗಳು, ರಾಜಕೀಯ ಪಕ್ಷಗಳು ಪಂಚಾಯತ್ ರಾಜ್ಯಕ್ಕಿಂತಲೂ ಕಲೆಕ್ಟರರ ರಾಜ್ಯವನ್ನೇ ಇಷ್ಟ ಪಡುವಂತಾಗಿದೆ. ಈ ಸಮಾನಾಂತರ ಸಮಿತಿಗಳನ್ನು ಬಲಪಡಿಸುವ ವಿಷಯದಲ್ಲಿ ಕೇಂದ್ರ ಸರ್ಕಾರವೂ ಹಿಂದೆ ಬಿದ್ದಿಲ್ಲ. ಇದಕ್ಕೆ ಉದಾಹರಣೆ ಕೇಂದ್ರ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯವು ಜಿಲ್ಲಾ ಅಭಿವೃದ್ಧಿ ಸಮಿತಿಗಳನ್ನು ಬಲಪಡಿಸಲು ಎಲ್ಲ ಪ್ರಯತ್ನವನ್ನು ಮಾಡುತ್ತಿದೆ. ಗ್ರಾಮೀಣಾಭಿವೃದ್ಧಿಗೆ ಅಗತ್ಯವಾದ ಕೋಟ್ಯಾಂತರರೂಪಾಯಿಗಳನ್ನು ಜಿಲ್ಲಾ ಪರಿಷತ್ತನ್ನು ಪಕ್ಕಕ್ಕೆ ಸರಿಸಿ, ಕೊಡುತ್ತಿದೆ.

ಕೇಂದ್ರ ಸರ್ಕಾರ ಮತ್ತು ಗ್ರಾಮೀಣ ಅಭಿವೃದ್ಧಿ ಮಂತ್ರಾಲಯವು ಸಂವಿಧಾನದ ೭೩ನೇ ತಿದ್ದುಪಡಿಯನ್ನು ಗಂಭೀರವಾಗಿ ಪರಿಗಣಿಸಿದ್ದರೆ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಮಿತಿಗಳು ನಿಷ್ಕ್ರಿಯವಾಗುತ್ತಿರಲಿಲ್ಲ. ಆದರೆ ಪಂಚಾಯತ್ ರಾಜ್ಯ ಸಂಸ್ಥೆಗಳಿಂದ ಭಿನ್ನವಾಗಿ ಈ ಜಿಲ್ಲಾ ಅಭಿವೃದ್ಧಿ ಸಮಿತಿಗಳು ಉಳಿಯುವಂತೆ ಮಾಡುವುದೇ ಈ ಹೊಸ ಕ್ರಮದ ಉದ್ದೇಶ್ಯವಾಗಿದೆ.

ಇದೆಲ್ಲವೂ ಆಡಳಿತದಲ್ಲಿ ವೃತ್ತಿಪರ ನಿಷ್ಣಾತತೆಯನ್ನು ತರುವ ಹಾಗೂ ಆಡಳಿತವನ್ನು ಬಲಪಡಿಸುವ ನೆಪದಲ್ಲಿ ನಡೆಯುತ್ತಿರುವಂತೆ. ತೋರುತ್ತದೆ. ೨೦೦೦ – ೨೦೦೧ನೇ ಸಾಲಿನ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ವರದಿಯ ಪ್ರಕಾರ ಈ ನೀತಿಯು ತಾತ್ಕಾಲಿಕವಾದುದಲ್ಲ. ಈ ಜಿಲ್ಲಾ ಅಭಿವೃದ್ಧಿ ಸಮಿತಿಗಳು ಪಂಚಾಯತ್ ರಾಜ್ಯ ಸಂಸ್ಥೆಗಳಿಂದ ಭಿನ್ನವಾದ ಸ್ವರೂಪವನ್ನು ಉಳಿಸಿಕೊಂಡೇ ಬರುವುದಾಗಿ ತಿಳಿಸಿದೆ. ಈ ಕ್ರಮದ ಮೂಲಕ ಅಭಿವೃದ್ಧಿ ಮಂತ್ರಾಲಯವು ವಿರೋಧಾಭ್ಯಾಸದ ನೀತಿಯನ್ನು ಜಾರಿಗೆ ತಂದಿದೆ. ಈ ಕ್ರಮ ಒಂದು ರೀತಿಯಲ್ಲಿ ಸಂವಿಧಾನದ ಮೇಲಿನ ಅತ್ಯಾಚಾರವೆಂದೇ ಹೇಳಬಹುದು ಮತ್ತು ಪಂಚಾಯತ್ ರಾಜ್ಯದ ಬಗ್ಗೆ ಸಂವಿಧಾನದ ಆಶಯ ಹಾಗೂ ಅರ್ಥಗಳೆರಡೂ ನಾಶವಾಗಿವೆ. ಕಳೆದ ೫೦ ವರ್ಷಗಳಿಂದ ಆಗಿರುವ ರೀತಿಯಲ್ಲಿಯೇ ಮುಂದೆಯೂ ವಿಕೇಂದ್ರಿಕರಣದ ಇಡೀ ಯೋಜನೆಯನ್ನೇ ಸಾಯಿಸುವುದರಲ್ಲಿ ಯಾವ ಸಂಶಯವೂ ಇಲ್ಲ. ಸಂವಿಧಾನ ಪುನರ್ ವಿಮರ್ಷಾ ಸಮಿತಿಗೆ ಸಲ್ಲಿಸಲಾದ ವರದಿಯಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ. ಪಂಚಾಯತ್ ರಾಜ್ಯ ಸಂಸ್ಥೆಗಳನ್ನು ನಿರ್ವೀರ್ಯಗೊಳಿಸುವಲ್ಲಿ ಅತ್ಯಂತ ವಿಪತ್ಕಾರಿ ಕ್ರಮವೇನೆಂದರೆ ಸಂಸದರಿಗೆ ಸ್ಥಳೀಯ ಕ್ಷೇತ್ರಾಭಿವೃದ್ಧಿಗಾಗಿ ಪ್ರತಿವರ್ಷ ೧೫೮೦ ಕೋಟಿ ರೂಪಾಯಿಗಳನಿಧಿಯನ್ನು ಕೊಡುವುದು ಆಗಿದೆ. ಈ ವಿಷಯದಲ್ಲಿ ಆಸಕ್ತರಾಗಿರುವ ನಾಗರೀಕರು ವ್ಯಾಕುಲಗೊಂಡಿದ್ದಾರೆ. ಏಕೆಂದರೆ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿ ಯೋಜನೆಯು ಸಂವಿಧಾನದ ೭೩ ಹಾಗೂ ೭೪ನೇ ತಿದ್ದು ಪಡಿಗಳಲ್ಲಿಯ ವಿಧೇಯಕಗಳನ್ನು ಜಾರಿ ಗೊಳಿಸುವುದಕ್ಕೆ ಕೇಂದ್ರ ಸರ್ಕಾರ ಹಾಗೂ ಸಂಸತ್ತಿಗೆ ಅಗತ್ಯವಾಗಿ ಇರಬೇಕಾದ ನೈತಿಕ ಶಕ್ತಿಯನ್ನೇ ಹ್ರಾಸಗೊಳಿಸಿದೆ. ಏಕೆಂದರೆ ಸ್ಥಳೀಯ ಸರ್ಕಾರಗಳ ಹಾಗೂ ಪೌರ ಸಭೆಗಳ ವ್ಯಾಪ್ತಿಗೆ ಬರುವ ಆಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಅಧಿಕಾರವನ್ನು ಸಂಸದರಿಗೆ ವಹಿಸಿ ಕೊಡಲಾಗಿದೆ. ಇದರ ಪರಿಣಾಮವಾಗಿ ನೌಕರಶಾಹಿಯ ಹಿಡಿತವು ಬಲಗೊಂಡಿದೆ. ಈ ಬೆಳವಣಿಗೆ ಸ್ಥಳೀಯ ಸರ್ಕಾರಗಳ ಮಾನಾಪಹರಣದ ಸಂಕೇತವಾಗಿದೆ. ಸಂವಿಧಾನದ ೩೪೩ಜಿ ವಿಧಿಯ ಅಡಿಯಲ್ಲಿ ತಾವೇ ಸ್ಥಾಪಿಸಿದ ಈ ಸಂಸ್ಥೆಗಳ ಮಾನಾಪಹರಣವನ್ನು ರಾಜಕಾರಣಿಗಳು ಮಾಡಿದ್ದಾರೆ. ಸಂವಿಧಾನ ಪುನರ್‌ವಿಮರ್ಷಾ ಸಮಿತಿಗೆ ಸಲ್ಲಿಸಲಾದ ಇನ್ನೊಂದು ವರದಿಯ ಪ್ರಕಾರ ಕೇಂದ್ರದಲ್ಲಿ ಅಧಿಕಾರದಲ್ಲಿರುವ ರಾಜಕೀಯಪಕ್ಷವು ಪಂಚಾಯಿತಿ ನಡೆಯಬೇಕಾದ ಪ್ರಜಾಸತ್ತಾತ್ಮಕ ಚುನಾವಣೆಗಳ ಬಗ್ಗೆ ಅಗೌರವವನ್ನು ವ್ಯಕ್ತಪಡಿಸಿದೆ. ಗುಜರಾತ್ ರಾಜ್ಯದ ಮುಖ್ಯ ಮಂತ್ರಿಯವರು ಪಂಚಾಯತಗಳಿಗೆ ಏಕಾಭಿಪ್ರಾಯದ ಮೂಲಕ ಚುನಾವಣೆ ನಡೆಸುವಂತೆ ಸೂಚಿಸಿರುವರಷ್ಟೇ

ಅಲ್ಲದೆ ಈ ಸೂಚನೆಯನ್ನು ಪಾಲಿಸುವ ಪಂಚಾಯತ್‌ಗೆ ೧ ಲಕ್ಷ ರೂಪಾಯಿಗಳವರೆಗೆ ಪ್ರೋತ್ಸಾಹಧನವನ್ನು ಕೊಡುವುದಾಗಿಯೂ ಹೇಳಿದ್ದಾರೆ.

ಪ್ರತಿಯೊಬ್ಬರೂ ಪಂಚಾಯತಿಯ ಸದಸ್ಯರ ಮೇಲೆ ಮತ್ತು ಅಧ್ಯಕ್ಷರುಗಳ ಮೇಲೆ ತಪ್ಪನ್ನು ಹೊರಿಸುತ್ತಿದ್ದಾರೆ. ಅವರೆಲ್ಲರೂ ಅಸಮರ್ಥರು, ಅದಕ್ಷರು ಮತ್ತು ಭ್ರಷ್ಟರು ಆಗಿದ್ದಾರೆಂಬ ಆಪಾದನೆಯನ್ನು ಹೊರಿಸಲಾಗುತ್ತಿದೆ. ಆದರೆ ಅವರೆಲ್ಲರೂ ಅಸಮರ್ಥತೆ ಅದಕ್ಷತೆ, ಭ್ರಷ್ಟತೆಯನ್ನು ಉಂಟು ಮಾಡುವಂಥ ಒಂದು ವ್ಯವಸ್ಥೆಯ ಅಂಗವಾಗಿದ್ದಾರೆಂಬ ಸಂಗತಿಯನ್ನೇ ಮರೆಯಲಾಗುತ್ತದೆ. ೭೩ನೇ ತಿದ್ದುಪಡಿಯನ್ನು ತರುವುದಕ್ಕಿಂತ ನಾಲ್ಕು ದಶಕಗಳ ಮುಂಚೆಯಿಂದಲೂ ಉನ್ನತ ಸ್ಥಾನದಲ್ಲಿದ್ದ ಪ್ರತಿನಿಧಿಗಳು ಯಾವರೀತಿ ಚುನಾವಣೆಗಳನ್ನು ಸ್ಪರ್ಧಿಸುತ್ತಿದ್ದರು, ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಜೊತೆಗೆ ಹೇಗೆ ನಡೆದುಕೊಳ್ಳುತ್ತಿದ್ದರು ಮತ್ತು ಮುಂದಿನ ಚುನಾವಣೆಗಳಿಗೆ ಸಂಪನ್ಮೂಲಗಳನ್ನು ಹೇಗೆ ಕ್ರೋಢಿಕರಿಸಿಕೊಳ್ಳುತ್ತಿದ್ದರು ಈ ಮುಂತಾದ ವಿಷಯಗಳಲ್ಲಿ ಮೇಲ್ಮಟ್ಟದಲ್ಲಿರುವ ಪ್ರತಿನಿಧಿಗಳೇ ಪಂಚಾಯಿತಿ ಸದಸ್ಯರಿಗೆ ಮಾದರಿಯಾಗಿದ್ದಾರೆ. ಜಿಯಾನ್ ಡ್ರೇಜ್ ಎಂಬುವರು ಕೈಗೊಂಡ ಅಧ್ಯಯನದ ಪ್ರಕಾರ ಅನೇಕ ರಾಜ್ಯಗಳಲ್ಲಿ ಜವಾಹರ್ ರೋಜಗಾರ್ ಯೋಜನೆ. ಇಂದಿರಾ ಅವಾಸ್ ಯೋಜನೆ ಮುಂತಾದ ಯೋಜನೆಗಳ ಮೇಲ್ವಿಚಾರಣೆ ಮಾಡುವುದೇ ಪಂಚಾಯಿತಿ ಅಧ್ಯಕ್ಷರ ಮುಖ್ಯ ಜವಾಬ್ದಾರಿಯಾಗಿದೆ. ಅನೇಕ ಸಂದರ್ಭಗಳಲ್ಲಿ ಈ ಕ್ರಮವು ಸಾರ್ವಜನಿಕ ಹಣವನ್ನು ವ್ಯವಸ್ಥಿತವಾಗಿ ದೋಚುವಂಥ ಒಂದು ವ್ಯವಸ್ಥೆಯೇ ಆಗಿದೆ. ವಿವಿಧ ಹಂತಗಳಲ್ಲಿರುವ ಅಧಿಕಾರಿಗಳಿಗೆ ಗ್ರಾಮ ಸೇವಕನಿಂದ ಹಿಡಿದು ಜೂನಿಯರ್ ಇಂಜಿನಿಯರ್, ಬಿ.ಡಿ.ಓ ಮುಂತಾದ ಎಲ್ಲ ಅಧಿಕಾರಿಗಳವರೆಗೆ ಅಭಿವೃದ್ಧಿ ಯೋಜನೆಯ ಹಣವನ್ನು ಪುನರ್ ಹಂಚುವ ಕೆಲಸವನ್ನು ಈ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮಾಡಬೇಕಾಗುತ್ತಿದೆ. ಉತ್ತರಪ್ರದೇಶದಲ್ಲಿ ನಿರಜಾ ಗೋಪಾಲ್ ಜಯಲ್ ಅವರ ಪ್ರಕಾರ ಬೇರೆ ಬೇರೆ ಅಧಿಕಾರಿಗಳಿಗೆ ಮತ್ತು ಪ್ರತಿನಿಧಿಗಳಿಗೆ ಸಂದಾಯವಾಗಬೇಕಾದ ದಳ್ಳಾಳಿ ಹಣದ ಶೇಕಡಾವಾರು ಪ್ರಮಾಣವನ್ನು ಗೊತ್ತು ಮಾಡಲಾಗುತ್ತದೆ. ಈ ರೀತಿ ಕೊಡಬೇಕಾದ ಕಮೀಶನ್ ಮೊತ್ತದ ಬಗ್ಗೆ ಪಂಚಾಯಿತಿ ಸಭೆಗಳಲ್ಲಿ ಬಹಿರಂಗವಾಗಿಯೇ ಚರ್ಚಿಸಲಾಗುತ್ತದೆ. ಈ ಬಗ್ಗೆ ಯಾರಿಂದಲೂ ಯಾವ ವಿರೋಧವೂ ಬರುವುದಿಲ್ಲ. ಇಂಥ ದುಸ್ಥಿತಿಗೆ ಯಾರನ್ನು ದೂಷಿಸಬೇಕು? ಪಂಚಾಯಿತಿಗಳನ್ನೆ ಅಥವಾಅವರ ಪ್ರತಿನಿಧಿಗಳನ್ನೆ ಅಥವಾ ಇಡೀ ವ್ಯವಸ್ಥೆಯನ್ನೆ? ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿರುವ ರಾಜಕಾರಣಿಗಳು ಮತ್ತು ಎಲ್ಲ ಹಂತಗಳಲ್ಲಿರುವ ಅಧಿಕಾರಿಗಳು, ಮೇಲ್ವರ್ಗ ಜಾತಿಯ ಮುಖಂಡರು, ಶ್ರೀಮಂತ ಹಾಗು ಬಲಿಷ್ಠ

ಹಿತಾಸಕ್ತಿಯುಳ್ಳವರು ಈ ಪಂಚಾಯತ್ ರಾಜ್ ವ್ಯವಸ್ಥೆ ಕುಸಿದುಬಿದ್ದರೆ ಬಹಳ ಸಂತೋಷ ಪಡುತ್ತಾರೆ. ಆದರೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ದುರ್ಬಲಗೊಳಿಸುವ ವಿಚಾರವೂ ಸಹ ಇದೆ, ಸಂವಿಧಾನದ ತಿದ್ದುಪಡಿಯನ್ನು ನಿಷ್ಕ್ರಿಯಗೊಳಿಸಲು ತೀರ್ಮಾನಿಸಿರುವಂಥ ಜನರು ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ೨೦೦೧ ಏಪ್ರಿಲ್ ೨೭ ರಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರಿಗೆ ಬರೆದ ಪತ್ರವನ್ನು ಓದಬೇಕು. ಆ ಪತ್ರದಲ್ಲಿ ಪ್ರಧಾನಿಯವರು ಹೀಗೆ ಬರೆದಿದ್ದಾರೆ:- "೭೩ನೇ ಸಂವಿಧಾನದ ತಿದ್ದುಪಡಿಯ ಮೇರೆಗೆ ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ಸಂವಿಧಾನತ್ಮಕ ಸ್ಥಾನವನ್ನು ಕೊಡಲಾಗಿದೆ ಮತ್ತು ನಮ್ಮ ಗಣರಾಜ್ಯ ವ್ಯವಸ್ಥೆಯಲ್ಲಿ ಪಂಚಾಯತ್‌ಗಳನ್ನು ಆಡಳಿತದ ಮೂರನೆಯ ಚಕ್ರವೆಂದಾಗಿ ಭಾವಿಸಲಾಗಿದೆ. ಮುಂದಿನ ವರ್ಷಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿಯ ಪ್ರತಿನಿಧಿಗಳ ಮತ್ತು ಇಡಿ ಗ್ರಾಮ ಸಮುದಾಯದ ಸಾಮರ್ಥ್ಯವನ್ನು ಹೆಚ್ಚಿಸುವ ವಿಷಯವು ಬಹಳ ಮಹತ್ವದ್ದಾಗಿಯೇ ಇರುತ್ತದೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳನ್ನು ಎರಡನೆ ದರ್ಜೆಗೆ ಇಳಿಸುವಂಥ ಯಾವುದೇ ಸಮಾನಾಂತರ ವ್ಯವಸ್ಥೆಯನ್ನು ನಿರ್ಮಿಸಕೂಡದು". ರಾಜಕೀಯ ನಾಯಕರು, ಸರ್ಕಾರಗಳು ಮತ್ತು ವಿವಿಧ ಹಂತಗಳಲ್ಲಿರುವಂಥ ಅಧಿಕಾರಿಗಳು ಪ್ರಧಾನಿಯವರ ಈ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದಾರೆಯೆ?

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ

- ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.
- ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಸಾಯುತ್ತಿರುವ ಭಾಷೆಗಳನ್ನು ಉಳಿಸುವುದು ಹೇಗೆ?

ಡಾ|| ಉದಯರವಿ ಎಸ್. ವಿ.

ಭಾಷೆಯ ಸಾವು ಅದರ ಹುಟ್ಟಿಗಿಂತ ಹಾಗೂ ಬೆಳವಣಿಗೆಗಿಂತ ಹೆಚ್ಚು ಗಂಭೀರವಾದ ವಿಷಯ. ಭಾಷೆ ಯಾವಾಗ ಸಾಯುತ್ತದೆ ಎಂದರೆ ಅದನ್ನು ಬಳಸುವ ಕೊನೆಯ ವ್ಯಕ್ತಿ ಸತ್ತಾಗ. ಬ್ರುಸ್ ಕನ್ನೆಲ್ ಎಂಬ ಭಾಷಾ ವಿಜ್ಞಾನಿ ದಕ್ಷಿಣ ಆಫ್ರಿಕಾದ ಕ್ಯಾಮರೂನ್‌ನಲ್ಲಿ ೧೯೯೫ ರಲ್ಲಿ ಅಧ್ಯಯನ ಮಾಡುತ್ತಿದ್ದ. ಆ ಪ್ರದೇಶದಲ್ಲಿ ಇದುವರೆಗೂ ಯಾರೂ ಅಧ್ಯಯನ ಮಾಡದ ಕಸಾಬೆ ಎಂಬ ಒಂದು ಭಾಷೆ ಇರುವುದು ತಿಳಿಯಿತು. ಅದನ್ನು ಬಳಸುತ್ತಿದ್ದ ಜನರೆಲ್ಲರೂ ಸತ್ತು ಹೋಗಿದ್ದಾರೆ. ಈಗ ಬದುಕಿರುವ ಏಕೈಕ ವ್ಯಕ್ತಿ 'ಬೋಗಾನ್'. ಇವನನ್ನು ಕಾಣಲು ಇನ್ನು ಸ್ವಲ್ಪ ದಿನಗಳಾದ ಮೇಲೆ ಹೋಗೋಣ ಎಂದು ಕೊಂಡು ಸ್ವಲ್ಪ ತಡಮಾಡಿ ಹೋಗುವ ವೇಳೆಗೆ ಬೋಗಾನ್ ಸತ್ತು ಹೋಗಿದ್ದ. ವಿಶ್ವ ಭಾಷೆಗಳಲ್ಲಿಯ ಒಂದು ಆವನೊಂದಿಗೆ. ಸತ್ತು ಹೋಗಿತ್ತು! ಹೀಗೆ ಪ್ರಪಂಚದ ಯಾವುದೋ ಒಂದು ಮೂಲೆಯಲ್ಲಿ ಒಂದೇ ಒಂದು ಭಾಷೆ ಸತ್ತು ಹೋಗಿದ್ದರೆ ಸಮಸ್ಯೆಯಾಗುತ್ತಿರಲಿಲ್ಲ. ಭಾಷೆಯ ಸಾವು ಭಾರೀ ದೊಡ್ಡ ಪ್ರಮಾಣದಲ್ಲಿ ಆಗುತ್ತಿರುವುದು ಚಿಂತೆಗೆ ಎಡೆ ಮಾಡಿದೆ.

ಪ್ರಪಂಚದಲ್ಲಿ ಬಳಕೆಯಾಗುತ್ತಿರುವ ಎಲ್ಲ ಭಾಷೆಗಳನ್ನೂ ಗುರುತಿಸಿ. ಅಧ್ಯಯನ ಮಾಡಲು ಆಗಿಲ್ಲವಾದರೂ ಒಂದು ನಂಬಲರ್ಹವಾದ ಅಂದಾಜಿನ ಪ್ರಕಾರ ಇಂದು ಪ್ರಪಂಚದಲ್ಲಿ ೬.೦೦೦ ಭಾಷೆಗಳಿವೆ. ಈ ಶತಮಾನದಲ್ಲಿ ಇದರ ಅರ್ಧ ಭಾಗದಷ್ಟು . ಅಂದರೆ ೩.೦೦೦ ಭಾಷೆಗಳು ಸಾಯಲಿವೆ. ೧೨೦೦ ತಿಂಗಳುಗಳಲ್ಲಿ ೩.೦೦೦ ಭಾಷೆಗಳು ಸಾಯುತ್ತವೆ ಎಂದರೆ. ಸರಾಸರಿ ಹದಿನೈದು ದಿನಗಳಿಗೆ ಒಂದು ಭಾಷೆ ಪ್ರಪಂಚದ ಯಾವುದೋ ಮೂಲೆಯಲ್ಲಿ ಸಾವನ್ನಪ್ಪಿರುತ್ತದೆ.

ಇದೆಲ್ಲ ನಮಗೆ ಹೇಗೆ ಗೊತ್ತು? ಕಳೆದ ಮೂರು ದಶಕಗಳಿಂದಲೂ ಪ್ರಪಂಚದಾದ್ಯಂತ ಭಾಷಾ ವಿಜ್ಞಾನಿಗಳು ಮಾಹಿತಿ ಸಂಗ್ರಹ ಮಾಡುತ್ತಿದ್ದಾರೆ. ಅದರಲ್ಲಿ ವ್ಯಾಕರಣ. ಶಬ್ದ ಭಂಡಾರ ಮತ್ತು ಉಚ್ಚಾರಣೆ ಬಗ್ಗೆ ಮಾತ್ರ ವಲ್ಲದೆ ಅದನ್ನು ಬಳಸುತ್ತಿರುವ ಜನರೆಷ್ಟು ಹಾಗೂ ಅವರ ವಯಸ್ಸೆಷ್ಟು ಎಂಬುದನ್ನು ಸಹ ದಾಖಲಿಸಲಾಗಿದೆ. ಕೆಲವೇ ಜನರು ಒಂದು ಭಾಷೆಯನ್ನು ಬಳಸುತ್ತಿದ್ದು. ಆ ಭಾಷೆಯನ್ನು ತಮ್ಮ ಮಕ್ಕಳಿಗೆ ಕಲಿಸುವ ಇಷ್ಟ/ ಆಸಕ್ತಿಯನ್ನು ತೋರಿಸದಿದ್ದರೆ ಆ ಭಾಷೆ ಬೇಗ ಸಾಯುತ್ತದೆ. ಕೇವಲ ೧೦೦ ಜನ ಬಳಸುವ ಭಾಷೆಗಳೂ ಸಹ ಪ್ರಪಂಚದಲ್ಲಿವೆ.

೧೯೯೯ ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಒಂದೊಂದು ಭಾಷೆಯನ್ನು ಕೇವಲ ಒಬ್ಬೊಬ್ಬನೇ ಮಾತನಾಡುವಂತಹ ೫೧ ಭಾಷೆಗಳು ಪ್ರಪಂಚದಲ್ಲಿ ಇದ್ದು, ಅಂತಹ ೨೮ ಭಾಷೆಗಳು ಆಸ್ಟ್ರೇಲಿಯಾ ಒಂದರಲ್ಲೇ ಇವೆ. (ಒಬ್ಬನೇ ಒಬ್ಬ ವ್ಯಕ್ತಿ ಒಂದು ಭಾಷೆಯನ್ನು ಹೇಗೆ ಮಾತನಾಡಬಲ್ಲ?... ಹೇಗೆಂದರೆ. ಆ ಭಾಷೆಯನ್ನು ಮಾತನಾಡುತ್ತಿದ್ದವರು ಕ್ಷೀಣಿಸುತ್ತಾ ಬಂದು ಈಗ ಕೊನೆಯ ವ್ಯಕ್ತಿ ಬದುಕಿ ಉಳಿದಿದ್ದಾನೆ ಎಂದು ಅರ್ಥ).

ಕೇವಲ ೧೦೦ ಜನರು ಬಳಸುವಂತಹ ೫೦೦ ಭಾಷೆಗಳು ಪ್ರಪಂಚದಲ್ಲಿವೆ. ೧,೦೦೦ ಕ್ಕಿಂತ ಕಡಿಮೆ ಜನ ಬಳಸುವಂತಹ ೧.೦೦೦ ಭಾಷೆಗಳು; ೧೦.೦೦೦ ಜನರು ಬಳಸುವಂತಹ ೧.೫೦೦ ಹಾಗೂ ಲಕ್ಷಕ್ಕಿಂತ ಕಡಿಮೆ ಜನರು ಬಳಸುವ ೩.೦೦೦ ಭಾಷೆಗಳಿವೆ.

ಅಂದರೆ ಪ್ರಪಂಚದ ಒಟ್ಟು ಭಾಷೆಗಳಲ್ಲಿ ಶೇಕಡಾ ೯೬ ರಷ್ಟು ಭಾಷೆಗಳನ್ನು ಬಳಸುವವರ ಪ್ರಮಾಣ ಪ್ರಪಂಚದ ಒಟ್ಟು ಜನಸಂಖ್ಯೆಯ ಶೇಕಡಾ ವಾರು ನಾಲ್ಕು ಮಾತ್ರ!

ಜನರಿಗೆ ತಮ್ಮ ಭಾಷೆಯನ್ನು ಬಳಸುವ ಉಳಿಸುವ ಉತ್ಸಾಹ ಹೊರಟು ಹೋದರೆ. ಅದು ಸಾಯುವುದರಲ್ಲಿ ಏನೂ ಸಂಶಯವಿಲ್ಲ. ಈ ಕ್ರಿಯೆ ಬಹು ವೇಗವಾಗಿ ನಡೆಯುತ್ತಿದೆ. ಒಂದು ಉದಾಹರಣೆ ಎಂದರೆ 'ಅಲ್ಯಲಟ್' ಅಲಾಸ್ಕದ ಪಶ್ಚಿಮದಲ್ಲಿರುವ ದ್ವೀಪವೊಂದರ 'ಆಟ್ಕ' ಎಂಬ ಹಳ್ಳಿಯಲ್ಲಿ ಮಾತ್ರ ಬಳಸಲಾಗುತ್ತಿರುವ ಭಾಷೆ. ೧೯೬೦ ರಲ್ಲಿ ಅರವತ್ತು ಜನ ಈ ಭಾಷೆಯನ್ನು ಬಳಸುತ್ತಿದ್ದರು. ೧೯೯೪ ರಲ್ಲಿ ಆ ಭಾಷೆಯ ಬಳಕೆದಾರರ ಸಂಖ್ಯೆ ೪೪ ಕ್ಕೆ ಇಳಿದಿದೆ. ಆ ಭಾಷೆಯನ್ನು ಬಳಸುತ್ತಿರುವವರ ಸಂಖ್ಯೆ ಇದೇ ರೀತಿ ಕ್ಷೀಣಿಸುತ್ತಾ ಬಂದರೆ. ೨೦೧೦ ವೇಳೆಗೆ ಆ ಭಾಷೆ ಇರುವುದಿಲ್ಲ.

ಅಷ್ಟೊಂದು ಭಾಷೆಗಳು ಏಕೆ ಸಾಯುತ್ತಿವೆ? ಇದಕ್ಕೆ ಕಾರಣ ನೈಸರ್ಗಿಕ ವಿಕೋಪಗಳಿಂದ ಹಿಡಿದು ವಿವಿಧ ರೀತಿಯ ಸಾಂಸ್ಕೃತಿಕ ಕಾರಣಗಳೂ ಇವೆ. ಒಂದು ಭಾಷೆಯನ್ನು ಮಾತನಾಡುವ ಸೀಮಿತ ಸಂಖ್ಯೆಯ ಜನ ಒಂದೇ ಕಡೆ ವಾಸವಾಗಿದ್ದರೆ. ಭೂಕಂಪ, ಪ್ರವಾಹ, ಜ್ವಾಲಾಮುಖಿ ಇಂತಹ ವಿಕೋಪಗಳಿಗೆ ಒಳಗಾಗಿ ಅವರು ಸುಲಭವಾಗಿ ಅಳಿಸಿ ಹೋಗುವ ಸಾಧ್ಯತೆ ಇದೆ. ಎಲ್ಲಕ್ಕಿಂತ ಪ್ರಮುಖ ಕಾರಣವೆಂದರೆ ಸಾಂಸ್ಕೃತಿಕ ಸಮೀಕರಣ. ವಸಾಹತೀಕರಣ ಬೆಳೆದಂತೆ ಕೆಲವೇ ಪ್ರಮುಖ ಭಾಷೆಗಳು ಪ್ರಪಂಚಾದ್ಯಂತ ತಮ್ಮ ಸಾಂಸ್ಕೃತಿಕ ಆಕ್ರಮಣ ನಡೆಸಿದ್ದರಿಂದ ಭಾಷೆಗಳು ಸಾಯುತ್ತಿವೆ. ಇಂಗ್ಲಿಷ್ ಅನೇಕ ಭಾಷೆಗಳಿಗೆ ಬದಲಿಯಾಗಿಬಿಟ್ಟಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಈ ರೀತಿ ದಕ್ಷಿಣ ಅಮೆರಿಕದಲ್ಲಿ ಸ್ಪಾನಿಷ್ ಮತ್ತು ಪೋರ್ಚುಗೀಸ್ ಭಾಷೆ

ಗಳೂ. ಉತ್ತರ ಏಷ್ಯಾದಲ್ಲಿ ರಷ್ಯನ್ ಹಾಗೂ ಉತ್ತರ ಆಫ್ರಿಕಾದಲ್ಲಿ ಅರ್‍ಯಾಬಿಕ್ ಭಾಷೆಗಳೂ ತಮ್ಮ ಆಕ್ರಮಣ ನಡೆಸಿವೆ.

ಈಗ ನಾವೇನು ಮಾಡಬಹುದು? ಎಷ್ಟೋ ಭಾಷೆಗಳನ್ನು ಉಳಿಸಲು ಈಗ ತುಂಬ ತಡವಾಗಿದೆ. ವಿನಾಶದ ಅಂಚಿನಲ್ಲಿರುವ ಭಾಷೆಗಳನ್ನು ಮಾತ ನಾಡುವ ವ್ಯಕ್ತಿಗಳು ತುಂಬಾ ವೃದ್ಧರಾಗಿದ್ದು ತಮ್ಮ ದೈನಂದಿನ ಬದುಕನ್ನು ನಿಭಾಯಿಸಲು ಹೆಣಗುತ್ತಿರುವವರಿಗೆ ಭಾಷೆಯನ್ನು ಉಳಿಸಲು ಸಮಯ, ಆಸಕ್ತಿ, ಚೈತನ್ಯಗಳು ಇರುವುದಿಲ್ಲ. ಮಾತನಾಡುವ ಕೆಲವಾದರೂ ಯುವಕರು ಇರುವಂತಹ ವಿನಾಶದ ಅಂಚಿನಲ್ಲಿ ಇರುವ ಬಾಷೆಗಳನ್ನು ಪುನಃಚೇತನ ಗೊಳಿಸಬಹುದು. (ರಿವೈ ಟಲೈಜೇಷನ್). ಹೀಗೆ ವಿನಾಶವಾಗುತ್ತಿದೆ ಎಂಬ ಸುಳಿವು ಸಿಕ್ಕ ಕೂಡಲೇ ಕ್ರಮ ತೆಗೆದುಕೊಂಡರೆ ಅದನ್ನು ಉಳಿಸಬಹುದು. ಆದರೆ, ಆ ಜನಾಂಗದ ವ್ಯಕ್ತಿಗಳಿಗೆ ಈ ಬಗ್ಗೆ ಆಸಕ್ತಿ ಇರಬೇಕು. ಯಾವ ಮುಖ್ಯವಾಹಿನಿ ಸಂಸ್ಕೃತಿಯಲ್ಲಿ ಆ ಭಾಷೆ ಮತ್ತು ಅದನ್ನು ಬಳಸುವವರು ಇದ್ದಾರೋ ಆ ಸಂಸ್ಕೃತಿ ಆ ಭಾಷೆ ಯನ್ನು ಗೌರವಿಸಬೇಕು. ಲಿಪಿ ಇರದ ಆ ಭಾಷೆಯನ್ನು ಬರಹರೂಪಕ್ಕೆ ಇಳಿಸಬೇಕು. ಅದರ ವ್ಯಾಕರಣ, ಬಳಕೆ, ಶಬ್ದ ಭಂಡಾರ ಎಲ್ಲವೂ ಒಳ ಗೊಳ್ಳುವಂತೆ ಪಠ್ಯಗಳನ್ನು ತಯಾರಿಸಿ ಅದನ್ನು ಆ ಕೋಮಿನ ಜನರಿಗೆ ಕಲಿಸ ಬೇಕು. ಅಧ್ಯಾಪಕರನ್ನು ನೇಮಿಸಲು, ಪಠ್ಯಗಳನ್ನು ಸಿದ್ಧಪಡಿಸಲು, ಅವರಲ್ಲಿ ಭಾಷಾಭಿಮಾನ ಮೂಡಿಸಲು, ಪ್ರಚಾರಗೊಳಿಸಲು ಧನಸಹಾಯ ಮಾಡಬೇಕು. ಇದರಿಂದ ಎರಡು ಪ್ರಯೋಜನಗಳು. ಮೊದಲನೆಯದು, ಸಾಕ್ಷರತೆ; ಸಾಯುವ ಭಾಷೆಗಳನ್ನು ನಾವೇಕೆ ಉಳಿಸಬೇಕು ಎಂಬುದಕ್ಕೆ ಎರಡನೆಯ ಕಾರಣ, ಒಂದು ಸಸ್ಯವೋ, ಜೀವಿಯೋ ಸಾಯುವ ಸ್ಥಿತಿಗೆ ಬಂದರೆ ನಾವು ತೋರುವಷ್ಟೇ ಕಾಳಜಿ ಭಾಷೆಯನ್ನು ಉಳಿಸಲೂ ತೋರಿಸಬೇಕು. ನಮ್ಮ ಭೂಮಿಯ ವೈವಿಧ್ಯತೆಯನ್ನು ಉಳಿಸಬೇಕು, ಭಾಷೆಯೊಂದು ಬರೀ ಭಾಷೆಯಲ್ಲ, ಅದರಲ್ಲಿ ಅದನ್ನು ಬಳಸುವ ಜನಾಂಗದ ಚರಿತ್ರೆ, ಸಂಸ್ಕೃತಿ, ಸಾಂಸ್ಕೃತಿಕ ಅನನ್ಯತೆ ಅಡಕವಾಗಿರುತ್ತವೆ.

ವಿಶ್ವ ಭಾಷೆಗಳ ಕೆಲೈಡೋಸ್ಕೋಪಿನ ಒಂದು ಬಣ್ಣದ ಗಾಜಿನ ಚೂರು ನಾಪತ್ತೆಯಾದರೂ ಅದರ ಸೊಗಸು ಕಡಿಮೆಯಾಗುತ್ತದೆ. ಪ್ರತಿ ಭಾಷೆ ಸಂಸ್ಕೃತಿಯಲ್ಲೂ ಅಪಾರವಾದ ಜ್ಞಾನವಿರುತ್ತದೆ. ಆ ಜನಾಂಗಕ್ಕೆ ಮಾತ್ರ ತಿಳಿದಿರುವ ಔಷಧೀಯ ಜ್ಞಾನವಾಗಲೀ, ಸಸ್ಯಲೋಕದ, ಪ್ರಾಣಿಲೋಕದ, ಖನಿಜಗಳ ಜ್ಞಾನವಾಗಲೀ ನಮಗೆ ದೊರೆಯಬಹುದು. ಇತರ ಭಾಷೆಗಳೊಂದಿಗೆ ಇದರ ಸಂಬಂಧದಿಂದ ಪೂರ್ವನಾಗರಿಕತೆಗಳ ಬಗ್ಗೆ, ಚಳುವಳಿಗಳ ಬಗ್ಗೆ ಗೊತ್ತಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ಆ ಭಾಷೆ ಉಂಟಾಗಲು ಅನೇಕ

ಸಹಸ್ರಾರು ವರ್ಷಗಳು ಹಿಡಿದಿರುತ್ತವೆ. ಈಗ ಅದನ್ನು ಸಾಯಲುಬಿಡಬಾರದು.

ಆದರೆ ಎಲ್ಲರಿಗೂ ಹೀಗೆ ಅನಿಸುವುದಿಲ್ಲ. ಪ್ರಪಂಚದಲ್ಲಿ ಅನೇಕ ಭಾಷೆಗಳು ಇರುವುದು ಒಂದು ಶಾಪ (ಟವರ್ ಆಫ್ ಬ್ಯಾಬೆಲ್). ಹೀಗಾಗಿ ಅದರ ಸಂಖ್ಯೆ ಕಡಿಮೆಯಾದರೆ ಶಾಪ ವಿಮೋಚನೆ ಆದಂತೆ ಎಂಬ ಅಭಿಪ್ರಾಯ ಪಡುವ ಜನರೂ ಇದ್ದಾರೆ. ಪ್ರಪಂಚದಾದ್ಯಂತ ಒಂದೇ ಒಂದು ಭಾಷೆ ಇದ್ದರೆ ಅಪಾರ್ಥಗಳು, ಜಗಳಗಳು ಇರುವುದಿಲ್ಲ ಎಂಬ ಅಭಿಪ್ರಾಯಪಡುತ್ತಾರೆ. ಇದು ಕೇಳಲು ಮಾತ್ರ ಚೆನ್ನ. ಆದರೆ ಅಸಂಭವ. ಒಂದೇ ಭಾಷೆ ಮಾತನಾಡುವ ದೇಶಗಳಲ್ಲಿ ಶಾಂತಿ ಇರುತ್ತದೆ ಎನ್ನುವುದು ಎಷ್ಟು ಸುಳ್ಳೋ ಇದೂ ಅಷ್ಟೇ ಸುಳ್ಳು. ಕಾಂಬೋಡಿಯ, ವಿಯೆಟ್ನಾಂ. ರ್ವಾಂಡ. ಬರುಂಡಿ, ಎಲ್ಲ ಒಂದೇ ಭಾಷೆ ಬಳಸುವ ದೇಶಗಳು, ಪ್ರಪಂಚ ಕಂಡ ಅತ್ಯಂತ ಭೀಕರ ಅಂತಯುದ್ಧಗಳು. ಅಶಾಂತಿ ಇಂತಹ ದೇಶಗಳಲ್ಲೇ ನಡೆದಿವೆ.

ಯುದ್ಧ ಮಾಡಲೇಬೇಕು ಎನ್ನುವವರಿಗೆ ಸಾಮಾನ್ಯ ಭಾಷೆ ಒಂದು ತಡೆ ಆಗಲಾರದು. ಅದೇ ರೀತಿ ಅನ್ಯೋನ್ಯವಾಗಿರಬೇಕೆಂದರೆ ಭಾಷಾ ವೈವಿಧ್ಯತೆ ಒಂದೂ ತಡೆ ಆಗಲಾರದು.

ಪ್ರಾಣಿಗಳು ಅಪಾಯದ ಅಂಚಿನಲ್ಲಿವೆ ಎಂದು ಪರಿಸರವಾದಿಗಳು ಕೂಗೆಬ್ಬಿಸುತ್ತಾರೆ. ಹೀಗೆ ಅಪಾಯದ ಅಂಚಿನಲ್ಲಿ ಇರುವ ಸಸ್ತನಿಗಳು ಒಟ್ಟು ಪ್ರಾಣಿಗಳ ಶೇ. ೧೦ ರಷ್ಟು ಮಾತ್ರ. ಅಪಾಯದ ಅಂಚಿನಲ್ಲಿರುವ ಪಕ್ಷಿಗಳ ಶೇ. ೫ ಮಾತ್ರ ಆದರೆ ಈಗ ಅಪಾಯದ ಅಂಚಿನಲ್ಲಿರುವ ಭಾಷೆಗಳು ಬೆರಗು ಶೇ ೫೦ ರಷ್ಟು, ಹೀಗಾಗಿ ನಾವು ಈ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ★

('ಪ್ರಜಾವಾಣಿ' ಸಾಭಾರ)

ಸನ್ಮಾನ್ಯರಿಂದ............

"ನಿಮ್ಮ ಪತ್ರಿಕೆ ನಿಜವಾಗಿಯೂ ನಿಸ್ವಾರ್ಥ ಸೇವೆಯನ್ನು ಮಾಡುತ್ತಿದ್ದು, ಪ್ರಸ್ತುತ ವಿಚಾರಗಳ ಬಗ್ಗೆ ಅರ್ಥಪೂರ್ಣ ಚರ್ಚೆ ನಡೆಯುವ ಚಿಂತನ ವೇದಿಕೆಯಾಗಿದೆ. ಆದರೂ, ಪತ್ರಿಕೆಯು ಇನ್ನೂ ಹೆಚ್ಚಿನ ಜನರಿಗೆ ತಲುಪದೇ ಇರುವುದು ಖೇದದ ಸಂಗತಿ.

– ಸುಮಾ ಎಂಬಾರ್

ನಮ್ಮ ಸಮಕಾಲೀನ ನಾಯಕ
ಅನಿಲ ಅಗ್ರವಾಲ್

– ಅಶೋಕ ಚಟರ್ಜಿ

ಅನಿಲ ಅಗ್ರವಾಲರ ಮರಣದಿಂದಾಗಿ ಭಾರತ ಮತ್ತು ವಿಶ್ವವು ಓರ್ವ ಪರಿಸರವಾದಿ ಹೋರಾಟಗಾರನನ್ನು ಕಳೆದುಕೊಂಡಿದೆ. ಅವರು ನಮ್ಮೆಲ್ಲರ ಜೀವನದ ಗುಣಮಟ್ಟವನ್ನು ಕಾಪಾಡಲು ಅವಿಶ್ರಾಂತವಾಗಿ ಹೋರಾಟ ಮಾಡಿದ ವ್ಯಕ್ತಿಯೆಂದೂ ಅವರ ಹೋರಾಟವು ಸಮರ್ಪಣೆ ಹಾಗೂ ಶ್ರೇಷ್ಠ ಗುಣಮಟ್ಟದ್ದು ಆಗಿತ್ತೆಂದೂ. ಸ್ಮರಿಸಲ್ಪಡುವುದು, ಇಂದು ಪ್ರಗತಿ ಅಥವಾ ಅಭಿವೃದ್ಧಿ ಕುರಿತಾಗಿ ಪ್ರಚಲಿತವಿರುವ ಅರ್ಥವನ್ನೇ ಅಗ್ರವಾಲರು ಪ್ರಶ್ನಿಸುತ್ತಿದ್ದರು. ಯಾರಿಗೆ ಅಭಿವೃದ್ಧಿ ಬಹಳ ಅಗತ್ಯವಾಗಿದೆಯೋ ಅವರು ಅದನ್ನು ಯಾವ ರೀತಿ ಅರ್ಥ ಮಾಡಿಕೊಳ್ಳುತ್ತಾರೆಂಬುದು ಮುಖ್ಯ ಎಂಬುದಾಗಿ ಅವರು ಹೇಳುತ್ತಿದ್ದರು. ಪರಿಸರವು ಸಾಮಾಜಿಕ ಹಾಗೂ ರಾಜಕೀಯ ಆಂದೋಳನವೂ ಆಗಿದೆ ಎಂಬ ಬಗ್ಗೆ ಅರಿವಿದ್ದ ಅವರು ಸಮಾಜದ ಎಲ್ಲ ವರ್ಗಗಳ ಜನರು ಅದರಲ್ಲಿ ಭಾಗವಹಿಸುವಂತೆ ಮಾಡಲು ಅಗ್ರವಾಲ್ ಮತ್ತು ಅವರು ಸ್ಥಾಪಿಸಿದ್ದ ವಿಜ್ಞಾನ ಮತ್ತು ಪರಿಸರಕೇಂದ್ರ ಇಬ್ಬರೂ ಶ್ರಮಿಸಿದರು. ತಾವು ಇರುವ ಕಾಲಧರ್ಮವನ್ನೇ ಪ್ರಶ್ನಿಸುವಷ್ಟರ, ಮಟ್ಟಿಗೆ ಸಾಮರ್ಥ್ಯವುಳ್ಳ ಮಹಿಳೆಯರಾಗಲೀ, ಪುರುಷರಾಗಲೀ ಇರುವುದು ಅಪರೂಪ. ಅಗ್ರವಾಲರು ಇಂಥ ಅಪರೂಪದ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಅಭಿವೃದ್ಧಿ ಮತ್ತು ಪರಿಸರ ರಕ್ಷಣೆ ಇವೆರಡು ಮಾನವನ ಉಳಿವಿಗೆ ಪೂರಕವಾಗುವ ಬದಲು ಒಂದಕ್ಕೆ ಒಂದು ವಿರುದ್ಧವಾದ ಸ್ಥಾನವನ್ನು ಹೊಂದಿರುವ ಈ ಯುಗದಲ್ಲಿ ಅನಿಲ ಅಗ್ರವಾಲ ಓರ್ವ ನಾಯಕರಾಗಿದ್ದರಷ್ಟೇ ಅಲ್ಲ ಪರಿಸರ ಮತ್ತು ಅದರ ರಕ್ಷಣೆ ಇವೆರಡರ ಮಧ್ಯ ಇರುವ ಸಂಬಂಧವನ್ನು ಬಹಳ ಸ್ಪಷ್ಟವಾದ ಮಾತುಗಳಲ್ಲಿ ಯಾವುದೇ ಚರ್ಚಾಗೋಷ್ಠಿಯಿರಲಿ ಮಂಡಿಸುವ ಸಾಮರ್ಥ್ಯವುಳ್ಳವರಾಗಿದ್ದರು. ಆ ಚರ್ಚಾಗೋಷ್ಠಿಗಳು ಹೊಗೆ ಮಾಲಿನ್ಯಕ್ಕೆ ಸಂಬಂಧಿಸಿದ್ದಾಗಿರಬಹುದು, ಪ್ರಾಕೃತಿಕ ಸಮತೋಲನವನ್ನು ಹದಗೆಡಿಸುವ ದೊಡ್ಡ ಯೋಜನೆಗಳಿಗೆ ಸಂಬಂಧಿಸಿದ್ದಾಗಿರಬಹುದು, ನೀರಿಗಾಗಿ ಹಾಗೂ ಜಲಕ್ಷಾಮದ ವಿರುದ್ಧದ ಹೋರಾಟಕ್ಕೆ ಸಂಬಂಧಿಸಿದ್ದಾಗಿರಬಹುದು; ಪರಂಪರಾಗತವಾಗಿ ಬಂದಿರುವ ಅಥವಾ ಸ್ಥಾನೀಯವಾಗಿ ಪ್ರಚಲಿತವಿರುವ ಜ್ಞಾನಕ್ಕೆ ಮನ್ನಣೆಕೊಡುವ ವಿಷಯಕ್ಕೆ ಸಂಬಂಧಿಸಿದ್ದಾಗಿರಬಹುದು. ಆ ಎಲ್ಲ ಪ್ರಕಾರದ ಗೋಷ್ಠಿಗಳಲ್ಲಿ ಅವರು ಯಾವಾಗಲು ಅತ್ಯುತ್ಸಾಹವುಳ್ಳವರಾಗಿರುತ್ತಿದ್ದರು. ಸಕ್ರಿಯವಾಗಿ ಭಾಗವಹಿಸುತ್ತಿದ್ದರು, ಅನಿಲ ಅಗ್ರವಾಲ ವಿವಾದಗಳನ್ನು ಆಹ್ವಾನಿ

ಸುತ್ತಿದ್ದರು. ತಮ್ಮ ಅಸಹನಾ ಸ್ವಭಾವದ ಕಾರಣದಿಂದಾಗಿ ಪ್ರಸಿದ್ಧರಾಗಿದ್ದರು. ಮೂರ್ಖರೆಂದೂ, ಭ್ರಷ್ಟರೆಂದೂ ಗೊತ್ತಾದ ವ್ಯಕ್ತಿಗಳನ್ನು ಅವರು ಕ್ಷಮಿಸುತ್ತಿರಲಿಲ್ಲ. ಯೋಜನೆ ಮತ್ತು ಅದರ ಕಾರ್ಯಾನುಷ್ಠಾನದ ಕೇಂದ್ರ ಬಿಂದುವಾಗಿ ಅಧಿಕಾರಿಗಳ ಬದಲು ಜನರನ್ನು ಪರಿಗಣಿಸಬೇಕೆಂದು ಹೋರಾಡುತ್ತಿದ್ದರು.

ಡಿಸೆಂಬರ್ ೩೧ರ 'ಡೌನ್ ಟು ಅರ್ಥ' ಪತ್ರಿಕೆಯ ಸಂಪಾದಕೀಯದಲ್ಲಿ "ನನಗೇಕೆ ಅಷ್ಟು ಕೋಪ" ಎಂಬ ಶೀರ್ಷಿಕೆಯಲ್ಲಿ ಈ ರೀತಿ ಬರೆದಿದ್ದಾರೆ:- ಪ್ರತಿಯೊಂದು ವಿಚಾರವು ಅಧಿಕಾರಿಶಾಹಿಯ ಆ ಅರ್ಥಹೀನ ಭಟ್ಟಿಯಲ್ಲಿ ತಯಾರಾಗಿ ಹೊರಬರುತ್ತದೆ ಮತ್ತು ಆ ವಿಚಾರವು ಈ ಮೊದಲು ಆ ಭಟ್ಟಿಯಿಂದ ಹೊರಬಂದಿದ್ದ ನಿಷ್ಪ್ರಯೋಜಕ ಮತ್ತು ನಿರ್ಜೀವ ವಿಚಾರದಂತೆಯೇ ಇದು ಸಹ ಆಗಿರುತ್ತದೆ. ಈ ಕ್ರಮದಿಂದಾಗಿ ಜನರು ವಿಚಾರ ಶೂನ್ಯರಾಗುತ್ತಾರೆ.

ಅನಿಲ್ ಅಗ್ರವಾಲ್ ಅನೇಕ ಮಹತ್ವದ ವಿಷಯಗಳನ್ನು ಪರಿಹರಿಸದೆ ಬಿಟ್ಟು ಹೋಗಿದ್ದಾರೆ. ಯಾವ ಪರಿಸರ ಮಾಲಿನ್ಯದ ವಿರುದ್ಧ ಅವರು ಹೋರಾಟ ನಡೆಸಿದರೋ ಅದೇ ವಾಯು ಮಾಲಿನ್ಯದ ಕಾರಣದಿಂದಾಗಿ ಬಂದ ಕ್ಯಾನ್ಸರ್ ರೋಗದಿಂದ ಮರಣಹೊಂದಿದರು. ಅಗರ್‌ವಾಲರು ಜವಾಬ್ದಾರಿಪೂರ್ಣವೂ ಮತ್ತು ಬಹಳ ಕಾಳಜಿಯನ್ನು ಹೊಂದಿದಂಥದೂ ಆದ ಒಂದು ಪರಂಪರೆಯ ಹೋರಾಟದ ಸಂಕೇತವಾಗಿದ್ದರು. ಅವರು ಅನೇಕ ಸಂದರ್ಭಗಳಲ್ಲಿ ಮಿತ್ರರಾಗಿದ್ದರೆ ಇನ್ನು ಕೆಲವು ಸಂದರ್ಭಗಳಲ್ಲಿ ಶತ್ರುವಾಗಿದ್ದರು. ಮತ್ತೆ ಕೆಲವೊಮ್ಮೆ ಸಹೋದ್ಯೋಗಿಯಾಗಿದ್ದರೆ ಇನ್ನೊಮ್ಮೆ ವಿರೋಧಿಯಾಗಿದ್ದರು. ಹೀಗೆ ಅವರು ಏನೆಲ್ಲ ಪಾತ್ರವನ್ನು ನಿರ್ವಹಿಸಿದರೂ ಕೂಡ ಅವರ ನಡತೆ ಪ್ರಶ್ನಾತೀತವಾಗಿರುತಿತ್ತು. ಮತ್ತು ಅವರು ಹೊಂದಿದ್ದ ನಂಬಿಕೆಯ ತೀವ್ರತೆಯನ್ನು ಮತ್ತು ಪ್ರಾಮಾಣಿಕತೆಯನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ. ಈ ಎಲ್ಲ ಗುಣಗಳು ಅನಿಲ್ ಅಗರ್‌ವಾಲರನ್ನು ನಮ್ಮ ಸಮಕಾಲೀನ ನಾಯಕನನ್ನಾಗಿ ಮಾಡಿವೆ. ಪ್ರಪಂಚದ ಪ್ರತಿಯೊಂದು ದೇಶದಲ್ಲಿ ಗೌರವವನ್ನು ಪಡೆದಂಥ ಒಂದು ಭಾರತೀಯ ಹೆಸರಾಗಿದೆ ಅನಿಲ್ ಅಗರವಾಲ್. ಅಗ್ರವಾಲರಂತೆ ಸಮಾಜದಲ್ಲಿ ಬದಲಾವಣೆ ತರುವುದಕ್ಕಾಗಿ ಹೋರಾಟ ಮಾಡುವ ಧೈರ್ಯ ನಮ್ಮಲ್ಲಿ ಇರುವುದಾದರೆ ಭವಿಷ್ಯವು ನಮ್ಮದಾಗುತ್ತದೆ. ★

ವಾಚಕರಲ್ಲಿ ವಿನಂತಿ

"ಜನಪದ ವಿಚಾರ"ವನ್ನು ತಮ್ಮ ಸ್ನೇಹಿತರಿಗೂ, ಬಂಧುಗಳಿಗೂ ಪರಿಚಯ ಮಾಡಿಕೊಟ್ಟು ಅದರ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿ.

—ಪ್ರಕಾಶಕರು

ಗಾಂಧೀ ಮತ್ತು ಇಂದಿನ ಭಾರತೀಯ ಆರ್ಥಿಕ ಸ್ಥಿತಿ

ಹಿಂದಿನ ಸಂಚಿಕೆಯಿಂದ ಮುಂದುವರೆದುದು.

ಈ ಎಲ್ಲ ಸಮಸ್ಯೆಗಳನ್ನು ಪ್ರತ್ಯೇಕವಾಗಿ ಪರೀಶಿಲಿಸಲು ಪ್ರಯತ್ನಿಸುತ್ತೇನೆ. ಅವು ನಮ್ಮ ಇಂದಿನ ಆರ್ಥಿಕ ಸ್ಥಿತಿಯನ್ನು ಬಹಳಷ್ಟು ಪ್ರಭಾವಿತಗೊಳಿಸುತ್ತವೆ. ಅವು ಪ್ರಮಾಣಾತ್ಮಕವಾಗಿಯೂ ಇವೆ ಹಾಗೂ ಗುಣಾತ್ಮಕವಾಗಿಯೂ ಇವೆ. ಈ ಎಲ್ಲ ಆರ್ಥಿಕ ಸಮಸ್ಯೆಗಳ ಬಗ್ಗೆ ಗಾಂಧೀಯವರ ಪ್ರತಿಕ್ರಿಯೆ ಏನಿದ್ದರಬಹುದು ಎಂಬುದನ್ನು ಪರೀಕ್ಷಿಸಲು ಪ್ರಯತ್ನಿಸುತ್ತೇನೆ. ಗಾಂಧೀಯವರ ಆರ್ಥಿಕ ನೀತಿಯ ಊಹೆ ಪ್ರಮಾಣಾತ್ಮಕ ಮತ್ತು ಗುಣಾತ್ಮಕವಾಗಿ ಏನಾಗಿತ್ತೆಂಬುದನ್ನು ತಿಳಿಯುವುದು ಸ್ವಲ್ಪ ಮಟ್ಟಿಗೆ ಕಷ್ಟಕರವೂ ಮತ್ತು ಅಪಾಯಕರವೂ ಆಗಿದೆ. ಏಕೆಂದರೆ ಆ ಐದು ಸಮಸ್ಯೆಗಳನ್ನು ಕುರಿತು ಗಾಂಧೀಯವರ ಆರ್ಥಿಕ ಸಲಹೆ ಮತ್ತು ಪರಿಹಾರಗಳನ್ನು ನೇರವಾಗಿ ಜಾರಿಗೆ ತರುವುದು ಸಾಧ್ಯವಿಲ್ಲ. ಪ್ರತಿಯೊಂದು ಸಂದರ್ಭದಲ್ಲಿಯೂ ಸಮಸ್ಯೆಯ ಮೂಲ ಏನೆಂಬುದನ್ನು ಸಿದ್ಧಪಡಿಸಬೇಕಾಗುತ್ತದೆ. ನಂತರ ಗಾಂಧೀಯವರ ಆರ್ಥಿಕ ವಿಚಾರಗಳು ಸಾವು ಅನುಷ್ಠಾನದಲ್ಲಿ ಪ್ರತಿಫಲಿತಗೊಳ್ಳುವಂತೆ ಮಾಡಬಹುದು. ಈ ಪ್ರಯತ್ನವು ವ್ಯಕ್ತಿಗತವಾಗಿರುವುದರಿಂದ ಅಪಾಯಕಾರಿಯಾದಿದೆ ಆದರೆ ದೇಶವು ಎದುರಿಸುತ್ತಿರುವ ಗಂಭೀರವಾದ ಆರ್ಥಿಕ ಸಮಸ್ಯೆಯ ಮೂಲದ ಬಗ್ಗೆ ಒಂದು ಸಾಮಾನ್ಯ ಒಪ್ಪಿಗೆಗೆ ಇರಲು ಸಾಧ್ಯವಿದೆ, ಈ ಒಪ್ಪಿಗೆಯನ್ನು ಲಭ್ಯವಿರುವ ಸಂಗತಿಗಳು ಹಾಗೂ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಹೊಂದಬಹುದಾಗಿದೆ. ಈ ವಿಷಯಗಳ ಬಗ್ಗೆ ಗಾಂಧೀಜಿಯವರು ಹೊಂದಿದ್ದ ವಿಚಾರಗಳ ಮೂಲಕ್ಕೆ ಬರಲು ಯಾವ ವಾಸ್ತವಿಕ ಸಾಧನಗಳೂ ಇಲ್ಲ. ಏಕೆಂದರೆ ಗಾಂಧೀಯವರ ವಿಚಾರದ ಮೂಲವೆಂದು ಯಾವುದನ್ನು ತಿಳಿಯಲಾಗುತ್ತದೊ ಆದನ್ನು ಅರ್ಥೈಸುವ ರೀತಿ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಾ ಹೋಗುತ್ತದೆ ಮತ್ತು ಇದು ಅನೇಕ ಸಂಗತಿಗಳನ್ನು ಅವಲಂಬಿಸಿರುತ್ತದೆ. ಅದನ್ನು ಇಲ್ಲಿ ಪರೀಕ್ಷಿಸಲು ಸಾಧ್ಯವಿಲ್ಲ, ಆದಾಗ್ಯೂ ನಮ್ಮನ್ನು ನಾಲ್ಕೂ ನಿಟ್ಟಿನಲ್ಲಿ ಸುತ್ತುವರೆದಿರುವಂಥ ಗಂಭೀರವಾದ ಆರ್ಥಿಕ ಸ್ಥಿತಿ ವಿದೇಶಿ ಆಡಳಿತದ ಕಾಲದಲ್ಲಿ ಇದ್ದ ರೀತಿಯಲ್ಲೇ ಇರುವಾಗ ಗಾಂಧೀಯವರು ಏನು ಅಭಿಪ್ರಾಯ ಪಡಬಹುದೆಂದು ತಿಳಿಯಲು ಪ್ರಯತ್ನಿಸುವುದು ಅಗತ್ಯವಾಗುತ್ತದೆ. ಒಂದು ವೇಳೆ ಈ ಕುರಿತು ಗಾಂಧೀಯವರ ವಿಚಾರಗಳನ್ನು ಒಮ್ಮೆಲೆ ತಳ್ಳಿಹಾಕಕೂಡದು, ಏಕೆಂದರೆ ಕೆಲವು ಸಂದರ್ಭಗಳಲ್ಲಿ ಸಮಸ್ಯೆಗಳು ಗಾಂಧೀಯವರ ಮೂಲ ವಿಚಾರಗಳ ಗಡಿಯನ್ನುದಾಟಿ ಹೋಗಿರಬಹುದು. ಗಾಂಧೀಯವರ ಈ ಹಿನ್ನಲೆ

ಮತ್ತು ಶ್ರೀ ಭಾರತದ ಇಂದಿನ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಾವು ನಮ್ಮ ಜೀವನವನ್ನು ಮತ್ತು ಕೋಟ್ಯಾಂತರ ಮೂಕ ಜನರ ಜೀವನವನ್ನು ಪ್ರಭಾವಿತಗೊಳಿಸುತ್ತಿರುವ ಈ ಐದು ಅಂಶಗಳ ಬಗ್ಗೆ ಸಂಕ್ಷಿಪ್ತವಾಗಿ ವಿಶ್ಲೇಷಣೆ ಮಾಡೋಣ. ಸಾಲದ ಮರುಪಾವತಿ ಸಮಸ್ಯೆಗೆ ಕಾರಣ ರಫ್ತಿಗಿಂತ ಆಮದನ್ನು ಹೆಚ್ಚಾಗಿ ಮಾಡಿರುವುದೇ ಆಗಿದೆ. ಕಳೆದ ೪೫ ವರ್ಷಗಳ ಸ್ವಾತಂತ್ರ್ಯದಲ್ಲಿ ಹಾಗೂ ನಮ್ಮ ಆರ್ಥಿಕ ವ್ಯವಹಾರದಲ್ಲಿ ಕೇವಲ ೨ ವರ್ಷಗಳು ಮಾತ್ರ ರಫ್ತಿಗಿಂತ ಆಮದಿನ ಪ್ರಮಾಣ ಹೆಚ್ಚಾಗಿತ್ತು. ಈ ಕೊರತೆ ಮುಂದಿನ ವರ್ಷಗಳಲ್ಲಿ ಹೆಚ್ಚಾಗುತ್ತಾ ಬಂದಿತು. ಈ ಕೊರತೆಯ ಕೊಂಚ ಭಾಗ ವನ್ನು ಅಗೋಚರವಾದ ನಮ್ಮ ರಫ್ತುಗಳ ಮೂಲಕ ಭರಿಸಲಾಗಿದೆ. ಹೊರದೇಶ ಗಳಲ್ಲಿ ಕಾರ್ಯನಿರತರಾಗಿರುವ ನಮ್ಮ ದೇಶದ ಪುರುಷರು ಮತ್ತು ಮಹಿಳೆಯರು ಜಮಾವಾಡಿದ ಹಣದಿಂದ ಸೇರಿರಿದೆ. ಅದರಲ್ಲಿಯೂ ಮುಖ್ಯವಾಗಿ ಕೊಲ್ಲಿ ದೇಶಗಳಲ್ಲಿ ಕೆಲಸಮಾಡುತ್ತಿರುವ ಭಾರತೀಯರಿಂದಾದ ಹಣದಿಂದ. ಇದರಲ್ಲಿ ವಿದೇಶಗಳು ನಮಗೆ ಕೊಟ್ಟಿರುವ ದಾನದತ್ತಿ ಸಾಲಗಳು ಮತ್ತು ನಮ್ಮ ಕಂಪನಿಗಳು ಹೊರದೇಶದಲ್ಲಿ ಮಾಡಿದ ಲಾಭಗಳೂ ಸೇರಿಕೊಂಡಿವೆ. ಇನ್ನೊಂದು ಭಾಗವು ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಾವು ಸಂಗ್ರಹಿಸಿದ ವಾಣಿಜ್ಯ ವ್ಯವಹಾರದ ಸಾಲದಿಂದ ತೀರಿಸಲ್ಪಟ್ಟಿವೆ. ಕಳೆದ ೨ ವರ್ಷಗಳಲ್ಲಿ ಈ ಅಗೋಚರ ರಫ್ತುಗಳು ಬಹಳಷ್ಟು ಕಡಿಮೆಯಾಗಿವೆ ಮತ್ತು ಅಂತರ್‌ರಾಷ್ಟ್ರೀಯ ವಾಣಿಜ್ಯ ಮಾರುಕಟ್ಟೆಯಲ್ಲಿ ನಮ್ಮ ಆರ್ಥಿಕ ಸಾಮರ್ಥ್ಯದ ಬಗ್ಗೆ ನಂಬಿಕೆ ಸೊನ್ನೆ ಪ್ರಮಾಣಕ್ಕೆ ಇಳಿದಿದೆ. ಅದರಿಂದಾಗಿ ಹೊರದೇಶಗಳಲ್ಲಿ ನಾವು ಇನ್ನು ಮುಂದೆ ದೊಡ್ಡ ಪ್ರಮಾಣದಲ್ಲಿ ಸಾಲವನ್ನು ಎತ್ತುವ ಸ್ಥಿತಿಯಲ್ಲಿಲ್ಲ.

ಇದರ ಅರ್ಥವೇನೆಂದರೆ ನಮ್ಮ ಆಮದಿನ ಬಿಲ್ಲಿನ್ನು ಮತ್ತು ಬಡ್ಡಿ ಯನ್ನು ಮತ್ತು ವಿದೇಶಿ ಸಾಲವನ್ನು ಹಿಂದಿರುಗಿಸುವ ಏಕೈಕ ಮಾರ್ಗ ನಮ್ಮ ರಫ್ತು ಸಾಮರ್ಥ್ಯವೊಂದೆ ಮತ್ತು ವಿಶ್ವದ ಎರಡು ಹಣಕಾಸು ನೆರವಿನ ಸಂಸ್ಥೆಗಳಾದ ಅಂತರಾಷ್ಟ್ರೀಯ ಹಣಕಾಸಿನ ನಿಧಿ ಹಾಗೂ ವಿಶ್ವಬ್ಯಾಂಕ್‌ಗಳಿಂದ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಸಾಲವನ್ನು ಪಡೆಯುವುದೇ ಆಗಿದೆ. ನಮ್ಮ ಇಂದಿನ ವಿದೇಶಿಸಾಲದ ಮೊತ್ತ ಒಂದು ಲಕ್ಷ ಕೋಟಿ ಆಗಿದೆ. ಈ ವರ್ಷ ಏಡ್ ಇಂಡಿಯಾ... ನಿಂದ ಪಡೆಯಲಾದ ೬.೬ ಡಾಲರ್ ಬಿಲಿಯನ್ ಸಾಲವನ್ನು ಗಮನಿಸೋಣ. ಈ ಕನ್ಸಾರ್ಟಿಯಂನಲ್ಲಿ ವಿಶ್ವಬ್ಯಾಂಕ್ ಅಲ್ಲದೇ ಇನ್ನೂ ಇತರ ೭೨ ದೇಶಗಳು ಸೇರಿವೆ. ಹೊರದೇಶದ ಸರ್ಕಾರಗಳಿಂದ ಕೊಡಲಾದ ಸಾಲಗಳು ಮೊತ್ತ ಸುಮಾರು ಮೂರು ಬಿಲಿಯನ್‌ಷ್ಟು. ಸಾಲದ ಷರ್ತು ಆ ಸಾಲ ಕೊಟ್ಟ ದೇಶಗಳಿಂದ ಯಂತ್ರೋಪಕರಣಗಳನ್ನು ಮತ್ತು ಕಚ್ಚಾ

ಪದಾರ್ಥಗಳನ್ನು ಖರೀದಿಸುವುದಕ್ಕಾಗಿಯೇ ಉಪಯೋಗಿಸಬೇಕಾಗುತ್ತದೆ. ಇನ್ನು ಉಳಿದ ವಿಶ್ವಬ್ಯಾಂಕಿನಿಂದ ಕೊಡಲಾದ ಮೂರು ಬಿಲಿಯನ್ ಡಾಲರ್‌ಗಳನ್ನು ಪಡೆಯಲು ಅಂತರಾಷ್ಟ್ರೀಯ ಹಣಕಾಸಿನ ನಿಧಿಯೊಂದಿಗೆ ನಡೆಯುತ್ತಿರುವ ಮಾತುಕತೆಗಳು ಈ ಕೆಳಗಿನ ಐದು ಕರಾರುಗಳನ್ನು ಒಳಗೊಂಡಿವೆ. ಈ ಕರಾರು ಗಳನ್ನು ಆ ನಿಧಿಯ ವ್ಯವಸ್ಥಾಪಕ ನಿರ್ದೇಶಕರು ಕಳೆದ ವರ್ಷ ಆಗಸ್ಟ್ ತಿಂಗಳಿಗೆ ಭಾರತಕ್ಕೆ ಬಂದಾಗ ಬಹಿರಂಗವಾಗಿ ತಿಳಿಸಿದರು.

೧ ಸರ್ಕಾರವು ತನ್ನ ಖರ್ಚನ್ನು ಕಡಿಮೆ ಮಾಡಬೇಕು ಮತ್ತು ಅದರ ಖೋತಾ ಬಜೆಟ್ ಶೇಕಡಾ ೮.೭ರಿಂದ ಶೇಕಡಾ ೪ಕ್ಕೆ ಇಳಿಸಬೇಕು, ಅಂದರೆ ಸರ್ಕಾರವು ಬಡವರಿಗೆ ಕೊಡುತ್ತಿದ್ದ ಸಬ್ಸಿಡಿಗಳಲ್ಲಿ ಬಹಳಷ್ಟು ಕಡಿತವನ್ನು ಮಾಡಬೇಕು.

೨ ವಾಣಿಜ್ಯ ವ್ಯವಹಾರಗಳನ್ನು ತೀವ್ರವಾಗಿ ಸುಧಾರಿಸಬೇಕು. ದೇಶದಲ್ಲಿ ಆಮದಾಗುವ ಎಲ್ಲ ಪದಾರ್ಥಗಳ ಮೇಲಿನ ಸುಂಕದ ಅಡೆತಡೆಗಳನ್ನು ತೆಗೆದು ಹಾಕಬೇಕು.

೩ ಆಮದು ತೆರಿಗೆಯನ್ನು ಕಡಿಮೆಮಾಡಿ ರಫ್ತುತೆರಿಗೆಯನ್ನು ಹೆಚ್ಚಿಸುವಂಥ ತೆರಿಗೆ ಸುಧಾರಣೆಯಿಂದಾಗಿ ಪದಾರ್ಥಗಳ ಬೆಲೆಗಳು ಏರಿ ಬಡವರಿಗೂ ಮತ್ತು ಮಧ್ಯಮ ವರ್ಗದ ಜನರಿಗೂ ಜೀವನ ನಡೆಸಲು ಕಷ್ಟವಾಗುವುದು.

೪ ನಷ್ಟದಲ್ಲಿರುವ ಎಲ್ಲ ಕಾರ್ಖಾನೆಗಳನ್ನು ಖಾಸಗಿ ವಲಯಕ್ಕೆ ವಹಿಸಿ ಕೊಟ್ಟಲ್ಲಿ ಎಲ್ಲ ಕಾರ್ಖಾನೆಗಳು ಮುಚ್ಚಿ ನಿರುದ್ಯೋಗವು ಹೆಚ್ಚುವುದು ಮತ್ತು ಎಲ್ಲ ಉತ್ಪಾದನಾ ಕೆಲಸವನ್ನು ಖಾಸಗೀ ಕಂಪನಿಗಳಿಗೆ ಹಸ್ತಾಂತರಗೊಳಿಸಿದಂತಾಗುವುದು.

೫ ರೈಲು ಮತ್ತು ವಿಮಾನ ಸಾರಿಗೆ ದರ ಹಾಗೂ ಕಚ್ಚಾ ಎಣ್ಣೆಯ ದರ ವನ್ನು ಹೆಚ್ಚಿಸುವುದರಿಂದ ಹಣದುಬ್ಬರದ ಪ್ರಮಾಣವು ಇನ್ನೂ ಹೆಚ್ಚಾಗಿ ಬಡವರ ಜೀವನದ ಮೇಲೆ ದುಷ್ಪರಿಣಾಮವುಂಟಾಗುವುದು.

ಅಂತರಾಷ್ಟ್ರೀಯ ಹಣಕಾಸಿನ ನಿಧಿಯಿಂದ ಪಡೆಯಲಾಗುವ ದೊಡ್ಡ ಪ್ರಮಾಣದ ಸಾಲವು ತಾತ್ಕಾಲಿಕವಾದ ನೆಮ್ಮದಿಯನ್ನು ಮಾತ್ರ ಕೊಡಬಲ್ಲದು. ಏಕೆಂದರೆ ಆ ಸಾಲವನ್ನು ೫ರಿಂದ ಹತ್ತು ವರ್ಷಗಳ ಒಳಗಾಗಿ ತೀರಿಸಬೇಕಾಗಿರುತ್ತದೆ. ಇದನ್ನು ನಮ್ಮ ಆಮದಿನ ಆದಾಯದಿಂದಲೇ ತೀರಿಸಬೇಕಾಗುತ್ತದೆ, ಆದ್ದರಿಂದ ನಮ್ಮ ಆಮದನ್ನು ಹೆಚ್ಚಿಸುವ ಪ್ರಯತ್ನದ ಮೇಲೆಯೇ ಬಹಳಷ್ಟು ಗಮನವನ್ನು ಕ್ರೋಢೀಕರಿಸಬೇಕಾಗುತ್ತದೆ.

ತೆರಿಗೆಯನ್ನು ಕೊಡದೇ ಇರುವಂಥ ನೂರು ದೊಡ್ಡ ಕಂಪನಿಗಳ ಪಟ್ಟಿಯನ್ನು ನಾನು ಪಾರ್ಲಿಮೆಂಟಿನಲ್ಲಿ ಇದ್ದಾಗ ಸರ್ಕಾರವು ಎಲ್ಲ ಸದಸ್ಯರಿಗೆ ಕೊಟ್ಟಿತು. ಇದರ ಪ್ರಕಾರ ಪ್ರತಿವರ್ಷ ಮೂರು ಸಾವಿರ ಕೋಟಿಗಳಷ್ಟು ತೆರಿಗೆಯ ಮೂಲಕ ಬರುವ ಆದಾಯವು ಸರ್ಕಾರಕ್ಕೆ ತಪ್ಪಿಹೋಗುತ್ತಿತ್ತು. ೧೯೮೩ ರಲ್ಲಿ ಸಾರ್ವಜನಿಕ ಹಣ ಹೂಡಿಕೆ ಮತ್ತು ನೀತಿಗೆ ಸಂಬಂಧಿಸಿದಂತೆ ಇರುವ ರಾಷ್ಟ್ರೀಯ ಸಂಸ್ಥೆಯನ್ನು ಈ ಪರಿಸ್ಥಿತಿಯ ಬಗ್ಗೆ ಅಧ್ಯಯನಮಾಡಲು ಸರ್ಕಾರವು ವಿನಂತಿಸಿಕೊಂಡಿತು ಮತ್ತು ದೇಶದಲ್ಲಿ ಇರುವ ಅಕ್ರಮ ಹಣ ಮತ್ತು ಐಶ್ವರ್ಯದ ಅಂದಾಜು ಮೊತ್ತವನ್ನು ತಿಳಿಸಲು ಕೋರಿತ್ತು. ಮತ್ತು ೧೯೮೫ ರಲ್ಲಿ ತನ್ನ ವರದಿಯನ್ನು ಅದು ಸಲ್ಲಿಸಿತು. ೧೯೮೪-೮೫ರಲ್ಲಿ ೩೬. ೭೮೦ ಕೋಟಿ ರೂಪಾಯಿ ತೆರಿಗೆ ತಪ್ಪಿಸುವುದರ ಮೂಲಕ ಕಪ್ಪುಹಣ ಸಂಗ್ರಹವಾಗಿದೆಯೆಂದು ತಿಳಿಸಿತ್ತು. ಮತ್ತು ಈ ಹಣವು ಪ್ರತಿ ವರ್ಷವು ಶೇಕಡಾ ೨೫ ರಷ್ಟು ಹೆಚ್ಚಾಗುತ್ತಾ ಹೋಗುತ್ತದೆ. ನನ್ನ ಅಧ್ಯಯನದ ಪ್ರಕಾರ ನಮ್ಮ ದೇಶದ ಇಂದಿನ ಒಂದು ಲಕ್ಷ ಕೋಟಿ ಆದಾಯದ ಶೇಕಡಾ ೪೦ ರಷ್ಟು ಈ ಅಕ್ರಮ ಹಣದ ಸಂಗ್ರಹ ಇದೆ. ಈ ಹೆಚ್ಚುತ್ತಿರುವ ಅಕ್ರಮ ಹಣ ಸಂಗ್ರಹದ ಒಂದು ದೊಡ್ಡ ದುಷ್ಪರಿಣಾಮ-ವೇನೆಂದರೆ ಅದು ನಮ್ಮ ರಾಜಕೀಯ ಜೀವನವನ್ನು, ಪಾರ್ಲಿಮೆಂಟನ್ನು ಮತ್ತು ರಾಜ್ಯ ವಿಧಾನಸಭೆಗಳನ್ನು ಪ್ರವೇಶಿಸಿರುವುದು. ಈ ಎಲ್ಲ ವಿಷಯಗಳನ್ನು ಅಧ್ಯಯನ ಮಾಡಿದ ನಂತರ ವ್ಯಕ್ತಿಯ ಜೀವನದ ಮತ್ತು ಸಾಮಾಜಿಕ ಜೀವನದ ನೈತಿಕತೆಯ ಪ್ರಶ್ನೆಗೆ ಬರುತ್ತೇವೆ. ಗಾಂಧೀಜಿಯವರ ಜೀವನದಲ್ಲಿ ಸತ್ಯ ಮತ್ತು ಅಹಿಂಸೆಗಳು ಕೇಂದ್ರ ಬಿಂದುಗಳಾಗಿದ್ದವು. ಜೀವನದ ಅವರ ಇಡೀ ಜೀವನವನ್ನು ಈ ಎರಡು ಸಂಗತಿಗಳು ಪ್ರಭಾವಯುತವನ್ನಾಗಿ ಮಾಡಿದ್ದವೆಂಬುದು ನಮಗೆಲ್ಲರಿಗೂ ಗೊತ್ತಿದೆ. ಈ ತತ್ವಗಳಿಗೆ ಸಾಕ್ಷ್ಯಾಧಾರಗಳು ಆಯಾ ಇರುತ್ತ ಅವರ ಅಭಿಪ್ರಾಯವಾಗಿತು. ಹೊರಗಿನ ಸಾಕ್ಷ್ಯಾಧಾರಗಳು ಇರಬೇಕಾದ ಅಗತ್ಯವೇ ಇಲ್ಲದಂಥ ಕೆಲವು ಘಳಿಗೆಗಳನ್ನು ನಾವು ನಮ್ಮ ಜೀವಮಾನದಲ್ಲಿ ಎದುರಿಸುತ್ತೇವೆ. ಒಳಗಿನ ಅಂತರಾತ್ಮವು "ನೀನು ಸರಿಯಾದ ಮಾರ್ಗದಲ್ಲಿದ್ದೀಯೋ ಎಡಕ್ಕಾಗಲಿ, ಬಲಕ್ಕಾಗಲಿ ತಿರುಗುವ ಅಗತ್ಯವಿಲ್ಲ. ನೇರ ಮತ್ತು ಇಕ್ಕಟ್ಟಾದ ದಾರಿಯಲ್ಲಿಯೇ ಮುನ್ನಡೆ" ಎಂದು ಹೇಳುತ್ತದೆ. ಅಂಥ ಧ್ವನಿಯ ಸಹಾಯದಿಂದ ನಾವು ಖಚಿತವಾಗಿ ಮತ್ತು ನಿಧಾನವಾಗಿ ಮುಂದೆ ನಡೆಯುತ್ತೇವೆ. ಇಲ್ಲಿ ಸಮಾಜವು ನಿರಂತರ ಬೆಳೆಯುವ ಪ್ರಕ್ರಿಯೆ ಆಗಿರುತ್ತದೆ. ಆಧ್ಯಾತ್ಮಿಕ ಅನುಭವಗಳು ತೆರೆಯುತ್ತಾ ಹೋಗುತ್ತವೆ. ಗಾಂಧೀಯವರಿಗೆ ಅರ್ಥಶಾಸ್ತ್ರವೆಂಬುದು ಆಧ್ಯಾತ್ಮಿಕತೆಯ ಹರಿವಾಗಿತ್ತು ಮತ್ತು ಅವರ ಎಲ್ಲ ಆರ್ಥಿಕ ವಿಚಾರ,

ಕ್ರಿಯೆ, ಬೋಧನೆ ಮತ್ತು ಆಚರಣೆಗಳೆಲ್ಲವು ಈ ಒಂದು ನೀತಿಯ ತಳಹದಿಯ ಮೇಲೆ ನಿಂತಿದ್ದವು. ಈ ನೀತಿಯ ಆಧಾರವಿಲ್ಲದೇ ಗಾಂಧೀಜಿಯವರ ಆರ್ಥಿಕ ವಿಚಾರಗಳನ್ನು ಮತ್ತು ಬೋಧನೆಗಳನ್ನು ಪಾಲಿಸಲು ಸಾಧ್ಯವಿಲ್ಲವೆಂದು ಗೊತ್ತಾಗುತ್ತದೆ. ನಮ್ಮಲ್ಲಿ ಯಾವ ಆಧ್ಯಾತ್ಮಿಕತೆಯನ್ನು ಗಾಂಧೀಜಿ ಬೆಳೆಸಲು ಇಷ್ಟಪಟ್ಟಿದ್ದರೂ ಆ ಆಧ್ಯಾತ್ಮಿಕತೆಯಿಂದ ನಾವು ಬಹಳ ದೂರವಾಗಿದ್ದೇವೆ. ನಾವು ಅಸತ್ಯ ಮತ್ತು ಹಿಂಸೆಯನ್ನು ಎಲ್ಲ ಪ್ರಕಾರಗಳಲ್ಲಿ ಬೆಳೆಸಿಕೊಂಡಿದ್ದೇವೆ. ಆದ್ದರಿಂದ ಗಾಂಧೀಜಿಯವರ ಅರ್ಥಶಾಸ್ತ್ರದ ಬೋದನೆ ಮತ್ತು ಕ್ರಿಯೆಯನ್ನು ಸಮಗ್ರವಾಗಿ ಅನುಸರಿಸಬೇಕೆಂಬುದರ ಬಗ್ಗೆ ಈ ಲೇಖನದಲ್ಲಿ ಹೆಚ್ಚಿನ ಒತ್ತನ್ನು ಕೊಟ್ಟಿರುವುದಿಲ್ಲ. ★

ಗಾಂಧೀ ಮಾರ್ಗದ ಸಭಾರ

ಅನು : ಸು.ಕೌ

Statement about ownership and other particulars about "Janapada Vichara" (according to Form IV Rule 8, circulated by Registrar of Newspapers for India).

1. Place of Publication : Melkote 571 431
2. Periodicity of Publication : Monthly
3. Printer's Name : Surendra Koulagi
   Nationlity : Indian
   Address : Janapada Seva Trust (R)
   Kalyani Street
   Melkote – 571 431
4. Publisher's Name : Surendra koulagi
   Nationality : India
   Address : Janapada Seva Trust (R)
   Kalyani street
   Melkote 571 431
5. Name & Addresses of the individuals who own the newspaper and partners or share – holders holding more than 1 percent of the capital : Janapada Seve Trust (R)
   Kalyani street
   Melkote 571 431

See Page 25

ಪಂಚಾಯತ್ ಪ್ರತಿನಿಧಿಗಳ ರಾಷ್ಟ್ರೀಯ ಸಮ್ಮೇಳನದ ಘೋಷಣಾ ಪತ್ರ

ಸಾಮಾಜಿಕ ವಿಜ್ಞಾನಗಳ ಸಂಸ್ಥೆಯು ಯೂನಿಸೆಫ್‌ನ ಸಹಕಾರದೊಂದಿಗೆ
೨೦೦೧ ಡಿಸೆಂಬರ್ ೨೨ ಮತ್ತು ೨೩ ಈ ಎರಡು ದಿನಾಂಕಗಳಲ್ಲಿ ಸಂವಿಧಾನದ
೭೩ನೇ ತಿದ್ದುಪಡಿ ಹತ್ತನೇ ವರ್ಷದ ಸಂದರ್ಭದಲ್ಲಿ ಪಂಚಾಯತ ರಾಜ್ಯ
ಪ್ರತಿನಿಧಿಗಳ ಒಂದು ರಾಷ್ಟ್ರೀಯ ಸಮ್ಮೇಳನವನ್ನು ಹೊಸದಿಲ್ಲಿಯಲ್ಲಿ ಏರ್ಪಡಿ
ಸಿತ್ತು. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕ್ ಪಂಚಾಯತ್‌ಗಳ ಅಧ್ಯಕ್ಷರು,
ಗ್ರಾಮ ಪಂಚಾಯತಿಗಳ ಅಧ್ಯಕ್ಷರೂ ಸೇರಿದಂತೆ ೧೫೦೦ ಪ್ರತಿನಿಧಿಗಳು ಈ
ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಈ ಸಮ್ಮೇಳನವನ್ನು ಕ್ರಾಂತಿಕಾರಿ
ಸಾಮಾಜಿಕ ಸುಧಾರಕರಾದ **ಅಣ್ಣಾ ಹಜಾರೆಯವರು** ಉದ್ಘಾಟಿಸಿದರು.
ಪ್ರಖ್ಯಾತ ಸಾಮಾಜಿಕ ಸಕ್ರಿಯ ಕಾರ್ಯಕರ್ತರಾದ ಮತ್ತು
ಯೂನಿಸೆಫಿನ ಭಾರತೀಯ ಪ್ರತಿನಿಧಿಯಾದ **ಮಾರಿಮಾ ಕಾಲಿವಿಸ್** ಸಮ್ಮೇಳನ
ದಲ್ಲಿ ಪ್ರಧಾನ ಭಾಷಣ ಮಾಡಿದರು. ಎರಡು ದಿನಗಳ ಈ ಐತಿಹಾಸಿಕ
ಸಮ್ಮೇಳನವನ್ನು ಉದ್ದೇಶಿಸಿ ಪಶ್ಚಿಮ ಬಂಗಾಳ, ಜಮ್ಮು ಮತ್ತು ರಾಜಸ್ಥಾನದ
ಮುಖ್ಯಮಂತ್ರಿಗಳಾದ ಡಾ. ಸೂರಜ್‌ಕಾಂತ್ ಮಿಶ್ರಾ, ಅಜಯ್ ಕೆ. ಸದೋತ್ರ,
ಮತ್ತು ಡಾ॥ ಸಿ.ಪಿ. ಜೋಶಿ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು.
ಕಾಂಗ್ರೆಸ್ ಪಕ್ಷದ ಮಣಿಶಂಕರ್ ಐಯ್ಯರ್ ಮತ್ತು ಮಾರ್ಗರೇಟ್ ಆಳ್ವಾ,
ತೆಲಗುದೇಶಂ ಪಕ್ಷದ ಕೆರನ್‌ನಾಯ್ಡು, ಭಾರತೀಯ ಜನತಾ ಪಕ್ಷದ ಸಾಹಿಬ್
ಸಿಂಗ್ ವರ್ಮ ಸಮಾತಪಕ್ಷದ ಜಯಾ ಜೆಟ್ಲಿ, ಜನತಾದಳ (ಎಸ್) ಪಕ್ಷದ
ಸುರೇಂದ್ರ ಮೋಹನ್, ಭಾರತೀಯ ಕಮ್ಯುನಿಸ್ಟ್ ಪಕ್ಷದ ಚತುರಾನಂದ್
ಮಿಶ್ರ, ಭಾರತೀಯ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್)ನ ಡಾ. ಥಾಮಸ್
ಇಸಾಕ್, ಮಣಿಪುರದ ಮಾಜಿ ಮುಖ್ಯಮಂತ್ರಿ ಶ್ರೀಮತಿ ಕಿರಣ್‌ಬೇಡಿ, ಭಾರತ
ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ಮಾಜಿ ಕಾರ್ಯದರ್ಶಿ
ಶ್ರೀಮತಿ ನಿರ್ಮಲಾ ಬುಕ್, ಪುಣೆಯ ಸಾಮುದಾಯಿಕ ಆರೋಗ್ಯ ಸಂಶೋಧನ
ಕೇಂದ್ರದ ಡಾ॥ ಎನ್.ಎಚ್. ಅಸಿತ, ಬೆಂಗಳೂರಿನ ಹೋಪ್ ಪ್ರತಿಷ್ಠಾನದ
ಅಧ್ಯಕ್ಷ ಡಾ॥ ಮನು ಎನ್. ಕುಲಕರ್ಣಿ ಮುಂತಾದವರೆಲ್ಲರು ಸಮ್ಮೇಳನ
ಉದ್ದೇಶಿಸಿ ಭಾಷಣಮಾಡಿದರು. ತದನಂತರ ಸಮ್ಮೇಳನವು ಈ ಕೆಳಗೆ ಕಾಣಿಸಿದ
ಘೋಷಣೆಯನ್ನು ಹಾಗೂ ಬೇಡಿಕೆಗಳ ಪತ್ರವನ್ನು ಅಂಗೀಕರಿಸಿತು:–
"ಪಂಚಾಯತ್ ಸಂಸ್ಥೆಗಳನ್ನು ಸ್ಥಳೀಯ ಸರ್ಕಾರಗಳನ್ನಾಗಿ ರೂಪಿಸಬೇಕೆಂಬುದು
ಸಂವಿಧಾನ ಕೊಟ್ಟ ತೀರ್ಪಾಗಿದೆ. ಪ್ರಜಾಪ್ರಭುತ್ವವು ತನಗೆ ಅಗತ್ಯವಾದ

ಸಾಮರ್ಥ್ಯವನ್ನು ಪ್ರಜೆಗಳಿಂದಲೇ ಪಡೆಯುತ್ತದೆ. ಸಮಾಜವನ್ನು ಕ್ರಿಯಾಶೀಲವನ್ನಾಗಿ ಮಾಡಲು ಮತ್ತು ದೇಶವನ್ನು ಸಮೃದ್ಧವಾಗಿಯೂ ಮತ್ತು ಬಲಿಷ್ಠವಾಗಿಯೂ ಮಾಡುವ ದಿಕ್ಕಿನಲ್ಲಿ ಸಂವಿಧಾನದ ೭೩ನೇ ತಿದ್ದುಪಡಿಯು ಜಾರಿಗೆ ಬಂದಿದೆ ಈ ತಿದ್ದುಪಡಿಯು ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸನ್ನು ಮತ್ತು ಆದರ್ಶಗಳನ್ನು ನೆರವೇರಿಸುವತ್ತ ಸಹಭಾಗಿತ್ವದ ಆಡಳಿತದ ಒಂದು ಯುಗವನ್ನೇ ಉದ್ಘಾಟಿಸಿದೆ. ಆ ದಿಕ್ಕಿನತ್ತ ಪ್ರಯಾಣವೇನೊ ಪ್ರಾರಂಭವಾಗಿದೆ. ಆದರೆ ಗುರಿಮಾತ್ರ ದೂರವಿದೆ. ಸಂವಿಧಾನದ ೭೩ನೇ ತಿದ್ದುಪಡಿಯು ಅಂಗೀಕಾರವಾಗಿ ಹತ್ತು ವರ್ಷಗಳಾದ ಸಂದರ್ಭವನ್ನು ಒಂದು ಹಬ್ಬದ ರೂಪದಲ್ಲಿ ಆಚರಿಸುವುದಕ್ಕಾಗಿ ದೇಶದಾದ್ಯಂತ ಇರುವ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಾದ ನಾವು ಹೊಸದಿಲ್ಲಿಯಲ್ಲಿ ರಾಷ್ಟ್ರಮಟ್ಟದ ಸಮ್ಮೇಳನ ನಡೆಸಲು ಸೇರಿದ್ದೇವೆ. ೧೯೯೨ ಡಿಸೆಂಬರ್ ೨೨ – ೨೩ ಈ ದಿನಾಂಕಗಳಲ್ಲಿ ಸಂಸತ್ತು ಈ ತಿದ್ದುಪಡಿಯನ್ನು ಅಂಗೀಕರಿಸಿ ಶಾಸನವನ್ನಾಗಿ ಮಾಡಿತು. ಈ ತಿದ್ದುಪಡಿಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಕುರಿತು ಸಂಸತ್ತು ಚರ್ಚೆ ನಡೆಸಿತು. ಕಳೆದ ಹಲವಾರು ವರ್ಷಗಳ ನಮ್ಮ ಕಾರ್ಯಾನುಭವದಿಂದ ಪಂಚಾಯತ್ ಸಂಸ್ಥೆಗಳು ಸ್ಥಳೀಯ ಸರ್ಕಾರಗಳಾಗಿ ಕೆಲಸವನ್ನು ಮಾಡಬೇಕೆಂಬ ಗುರಿಯನ್ನು ತಲುಪಲು ನಾವು ಇನ್ನೂ ಬಹಳಷ್ಟು ಶ್ರಮಿಸಬೇಕಾಗಿದೆಯೆಂಬುದನ್ನು ಬಹಳ ಆತಂಕದಿಂದ ಅರಿತಿದ್ದೇವೆ.

ಪಂಚಾಯತ್‌ಗಳು ಇನ್ನೂ ಬಾಲ್ಯವಸ್ಥೆಯಲ್ಲಿರುವುದರಿಂದ ಅವುಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪೂರ್ಣ ಪ್ರಮಾಣದ ಸಹಾಯ ಬೇಕಾಗಿದೆ. ಆದ್ದರಿಂದ ನಾವು ನಡೆಸಿದ ವಿಚಾರಪೂರ್ಣವಾದ ಚರ್ಚೆಗಳ ಆಧಾರದ ಮೇಲೆ ಈ ಕೆಳಗೆ ಕಾಣಿಸಿದ ೨೦ ಬೇಡಿಕೆಗಳ ಮಾನವಿಯನ್ನು ಅಂಗೀಕರಿಸುತ್ತೇವೆ.:–

೧ ರಾಜ್ಯ ಸರ್ಕಾರದ ವಾರ್ಷಿಕ ಯೋಜನೆಯ ಬಜೆಟಿನಲ್ಲಿ ಮೂರನೆ ಒಂದು ಭಾಗವನ್ನು ಸ್ಥಳೀಯ ಸರ್ಕಾರಗಳಿಗೆಂದೇ ಮೀಸಲಾಗಿಡಬೇಕು,

೨ ರಾಜ್ಯ ಹಣಕಾಸು ಆಯೋಗವು ಸಲ್ಲಿಸಿದ ಶಿಫಾರಸ್ಸುಗಳನ್ನು ಜಾರಿಗೆ ತರುವ ಬಗ್ಗೆ ೬ ತಿಂಗಳುಗಳೊಳಗಾಗಿ ತೀರ್ಮಾನ ಕೈಗೊಳ್ಳುವಂತೆ ರಾಜ್ಯ ಸರ್ಕಾರಗಳಿಗೆ ಶಾಸಕೀಯ ನಿಬಂಧವನ್ನು ಜಾರಿಗೆ ತರಬೇಕು;

೩ ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವ ಬಗ್ಗೆ ಪಂಚಾಯತ್‌ಗಳಿಗೆ ಅಧಿಕಾರಗಳನ್ನು ಕೊಡಬೇಕು:.

೪ ರಾಜ್ಯ ಹಾಗೂ ಲೋಕ ಸಭಾ ಸದಸ್ಯರ ಸ್ಥಾನೀಯ ಕ್ಷೇತ್ರಾಭಿವೃದ್ಧಿನಿಧಿ

ಯನ್ನೂ, ವಿಧಾನ ಸಭಾ ಸಂಸದರ ಕ್ಷೇತ್ರೀಯ ಅಭಿವೃದ್ಧಿ ನಿಧಿಯನ್ನೂ, ಜಿಲ್ಲಾ ಪಂಚಾಯತಿಗಳ ನಿಧಿಯೊಂದಿಗೆ ಸೇರಿಸಬೇಕು; ಈ ಒಟ್ಟುಗೂಡಿದ ಈ ನಿಧಿಯನ್ನು ಜಿಲ್ಲಾ ಯೋಜನಾ ಸಮಿತಿಯು ಅಂಗೀಕರಿಸಿದ ಯೋಜನೆಗಳಿಗಾಗಿ ಉಪಯೋಗಿಸಬೇಕು;

೫ ದೇಶದಾದ್ಯಂತ ಇರುವ ಎಲ್ಲ ಗ್ರಾಮಸಭೆಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳ ಅಡಿಯಲ್ಲಿ ಫಲಾನುಭವಿಗಳನ್ನು ವ್ಯಕ್ತಿಗತ ಆಧಾರದ ಮೇಲೆ ಆಯ್ಕೆ ಮಾಡುವ ಹಕ್ಕನ್ನು ಮತ್ತು ಗ್ರಾಮ ಪಂಚಾಯತಿಗಳ ಯೋಜನೆ ಹಾಗು ಬಜೆಟನ್ನು ಒಪ್ಪುವ ಅಧಿಕಾರವನ್ನು ಮತ್ತು ನಿಧಿಯ ಉಪಯೋಗದ ಬಗ್ಗೆ ಪ್ರಮಾಣೀಕರಿಸುವ ಹಕ್ಕನ್ನು ಕೊಡಬೇಕು.

೬ ಕೇಂದ್ರ ಸರ್ಕಾರದಿಂದ ಪ್ರಾಯೋಜಿತವಾಗುವ ಎಲ್ಲ ಯೋಜನೆಗಳನ್ನು ಜಾರಿಗೊಳಿಸುವ ಮಾಧ್ಯಮಗಳಾಗಿ ಪಂಚಾಯತ್‌ರಾಜ್ ಸಂಸ್ಥೆಗಳು ರೂಪುಗೊಳ್ಳಬೇಕು.

೭ ಸಣ್ಣಪ್ರಮಾಣದ ಸಾಲ ಕೊಡುವ ಕಾರ್ಯಕ್ರಮಗಳು ಜಿಲ್ಲಾ ಯೋಜನೆಯ ಅಂಗವಾಗಿಯೇ ಜಾರಿಗೊಳ್ಳಬೇಕು.

೮ ಈಗಿರುವ ಸಮುದಾಯ ಅಭಿವೃದ್ಧಿ ಬ್ಲಾಕ್‌ಗಳನ್ನು ಪಂಚಾಯತ್ ಬ್ಲಾಕ್‌ಗಳೊಂದಿಗೆ ವಿಲೀನಗೊಳಿಸಬೇಕು ಮತ್ತು ಬ್ಲಾಕ್ ಅಭಿವೃದ್ಧಿ ಅಧಿಕಾರಿಗಳ ಸ್ಥಾನವು ಬ್ಲಾಕ್ ಪಂಚಾಯತಿಗಳ ಸೆಕ್ರೆಟರಿಯೆಂದು ಪುನರ್ ನಾಮಕರಣಗೊಳ್ಳಬೇಕು.

೯ ಈಗಿರುವ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಏಜೆನ್ಸಿಗಳನ್ನು ರದ್ದುಗೊಳಿಸಿ ಅವುಗಳ ಕಾರ್ಯ ಜವಾಬ್ದಾರಿಗಳನ್ನೂ, ಅಧಿಕಾರಗಳನ್ನೂ, ಸಿಬ್ಬಂದಿಯನ್ನು ಮತ್ತು ಆಸ್ತಿಯನ್ನು ಜಿಲ್ಲಾ ಪಂಚಾಯತಿಗಳಿಗೆ ವರ್ಗಾಯಿಸಬೇಕು.

೧೦ ಜಿಲ್ಲಾ ಅಭಿವೃದ್ಧಿ ಸಮಿತಿಯನ್ನು (DDC)ಯನ್ನು ರದ್ದುಗೊಳಿಸಬೇಕು, ಅದರ ಸ್ಥಾನದಲ್ಲಿ ಜಿಲ್ಲಾ ಯೋಜನಾ ಸಮಿತಿಯನ್ನು ಸ್ಥಾಪಿಸಬೇಕು (DPC)ಯನ್ನು ಮತ್ತು ಜಿಲ್ಲಾ ಪಂಚಾಯತಿಯ ಅಧ್ಯಕ್ಷರನ್ನು ಈ DPCಯ ಅಧ್ಯಕ್ಷರನ್ನಾಗಿ ಮಾಡಬೇಕು.

೧೧ ಸೂಕ್ತ ಸೇವಾ ಹಿರಿತನದ ಅಧಿಕಾರಿ ಒಬ್ಬರನ್ನು ಜಿಲ್ಲಾ ಪಂಚಾಯತಿಗೆ ಪ್ರಧಾನಕಾರ್ಯ ನಿರ್ವಹಣಾ ಅಧಿಕಾರಿಯನ್ನಾಗಿ ನೇಮಿಸಬೇಕು.

೧೨ ಪಂಚಾಯತಿಗಳು ಮತ್ತು ಮುನಿಸಿಪಾಲ್ಟಿಗಳ ಪ್ರತಿನಿಧಿಗಳನ್ನೊಳ

ಗೊಂಡ ರಾಜ್ಯ ಮಟ್ಟದ ಅಭಿವೃದ್ಧಿ ಕೌನ್ಸಿಲ್‌ನ್ನು ಸ್ಥಾಪಿಸಬೇಕು. ಪಂಚಾಯುತಿಗಳ ವ್ಯಾಪ್ತಿಯಲ್ಲಿ ಬರುವ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರಾಜ್ಯ ಅಭಿವೃದ್ಧಿ ಕೌನ್ಸಿಲ್‌ನ ಪರಾಮರ್ಶೆ ಯೊಂದಿಗೆ ಪ್ರಾರಂಭಿಸಬೇಕು.

೧೩ ಪಂಚವಾರ್ಷಿಕ ಯೋಜನೆಗಳಲ್ಲಿ ವಿಕೇಂದ್ರೀಕರಣ ಮತ್ತು ಜನತೆಯ ಭಾಗಿದಾರಿತ್ವಗಳನ್ನು ಯೋಜನೆಯ ಮುಖ್ಯ ಭಾಗವನ್ನಾಗಿ ಮಾಡಬೇಕು.

೧೪ ಪ್ರತಿಯೊಂದು ರಾಜ್ಯದಲ್ಲಿ ನ್ಯಾಯ ಪಂಚಾಯತಿಗಳನ್ನು ಸ್ಥಾಪಿಸಬೇಕು.

೧೫ ಪ್ರತಿಯೊಂದು ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪಂಚಾಯತ್ ರಾಜ್ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಬೇಕು. ಚುನಾಯಿತರಾದ ಪ್ರತಿನಿಧಿಗಳಿಗೆ ಒಂದು ವರ್ಷದೊಳಗಾಗಿ ಪ್ರಶಿಕ್ಷಣವನ್ನು ಕೊಡುವುದನ್ನು ಖಚಿತಗೊಳಿಸಬೇಕು.

೧೬ ಸಂಸದರಿಗೂ, ವಿಧಾನಸಭಾ ಸದಸ್ಯರಿಗೂ, ಪಂಚಾಯತಿಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೂ ಕ್ರಮಬದ್ಧವಾದ ಶಿಕ್ಷಣವನ್ನು ಕೊಡಬೇಕು.

೧೭ ಪಂಚಾಯತಿಗಳ ಕಾರ್ಯಕ್ಷೇತ್ರದಲ್ಲಿ ಜಾರಿಯಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕಾರ್ಯಕ್ರಮಗಳ ಬಗ್ಗೆ ಪಂಚಾಯತ್‌ಗಳಿಗೆ ಮಾಹಿತಿ ದೊರೆಯಲು ಅನುಕೂಲವಾಗುವಂತೆ ಮಾಹಿತಿ ಪಡೆಯುವ ಹಕ್ಕಿನ ಶಾಸನವನ್ನು ಕೂಡಲೇ ಅಂಗೀಕರಿಸಬೇಕು.

೧೮ ಚುನಾಯಿತ ಪ್ರತಿನಿಧಿಗಳಿಗೆ ಸೂಕ್ತವಾದ ಗೌರವಧನವನ್ನು ನಿಗದಿ ಪಡಿಸಬೇಕು.

೧೯ ಪಂಚಾಯತಿಗಳ ಮೂಲಕವೇ ಮಹಿಳೆಯರಿಗೆ ಸಂಬಂಧಿಸಿದ ಯೋಜನೆಗಳನ್ನು ಜಾರಿಗೆ ತರಬೇಕು.

೨೦ ಪಂಚಾಯಿತ್ ರಾಜ್ಯಕ್ಕೆ ಸಂಬಂಧಿಸಿದ ಕಾನೂನುಗಳಿಗೆ ವಿರೋಧವಾಗಿರುವಂಥ ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾನೂನುಗಳಿಗೆ ತಿದ್ದುಪಡಿ ತರಬೇಕು. ◆

I. Surendra Koulagi hereby declare that the particulars given above are true to the best of my knowledge and belief.

Sd. Surendra Koulagi

1-3-2002 Signature of the publisher

ಕನ್ನಡತ್ವದ ಬೆಳವಣಿಗೆ ಸಂಘರ್ಷದ ಮಾರ್ಗದಲ್ಲಿ ಅಲ್ಲ, ಅನುಸಂಧಾನದ ಮಾರ್ಗದಲ್ಲಿ

– ಯು. ಆರ್. ಅನಂತಮೂರ್ತಿ

ಅಧ್ಯಕ್ಷ ಪದವಿಯ ಈ ಗೌರವವನ್ನು ನಾನು ಬಯಸಿರಲಿಲ್ಲ; ನಿರೀಕ್ಷಿಸಿಯೂ ಇರಲಿಲ್ಲ. ಅಲ್ಲದೆ, ಕೊಂಚ ಸೋಮಾರಿಯೂ, ಏನನ್ನಾದರೂ ಬರೆದು ಓದಬೇಕೆಂದರೆ ಹಿಂಜರಿಯುವವನೂ, ಜನರೆದುರು ನಿಂತನಿಲುವಿನಲ್ಲೇ ಆಲೋಚಿಸುತ್ತಲೇ ಹೊಳೆದಂತೆ ಮಾತಾಡುವುದರಲ್ಲಿ ಹೆಚ್ಚು ಸುಖಕಾಣುವವನೂ ಆದ ನಾನು ಈ ಭಾಷಣವನ್ನು ನನ್ನೊಳಗೇ ಅಂದುಕೊಳ್ಳುತ್ತ, ತಿದ್ದಿಕೊಳ್ಳುತ್ತ, ಆಡಬೇಕೆಂದು ಅನ್ನಿಸುವ ಮಾತುಗಳು ಸಹಸ್ರಾರು ಕನ್ನಡಿಗರಿಗೆ ಎಷ್ಟು ಪ್ರಸ್ತುತವಾದೀತು ಎಂದು ಆತಂಕಪಡುತ್ತ, ಅಧ್ಯಕ್ಷನಾಗಿ ಆಯ್ಕೆಯಾದ್ದನ್ನು ತಿಳಿದ ದಿನದಿಂದಲೂ ಈಗ ಇಲ್ಲಿ ನಿಮ್ಮೆದುರು ಮಾತಾಡಲು ನಿಂತಿರುವ ಕ್ಷಣದವನ್ನು ದಿಗಿಲಿನಲ್ಲಿ ಊಹಿಸಿಕೊಳ್ಳುತ್ತ ಕಳೆದಿದ್ದೇನೆ. ಹೀಗಾಗಿ ನನಗೆ ಸಿಕ್ಕಿರುವ ಈ ಗೌರವ ಅಷ್ಟೇನೂ ನನಗೆ ಸಂಭ್ರಮಪಡುವ ವಿಷಯವಾಗಲಿಲ್ಲ. ಬದಲಾಗಿ, ನನ್ನನ್ನೇ ನಾನು ಶೋಧಿಸಿಕೊಳ್ಳುವ ಧ್ಯಾನವಾಯಿತು. ಈ ವೇದಿಕೆಯಿಂದಲೇ ನಮ್ಮ ಕಾಲದ, ಯಾಕೆ ಎಲ್ಲಕಾಲದ, ಮಹಾಪುರುಷರಲ್ಲಿ ಒಬ್ಬರಾದ ಮಹಾತ್ಮ ಗಾಂಧೀಜಿಯವರು ನಾನು ಹುಟ್ಟುವುದಕ್ಕಿಂತ ಮುಂಚೆ ಮಾತಾಡಿದ್ದರೆಂದು ತಿಳಿದ ಮೇಲಂತೂ 'ಶಬ್ದಸೂತಕ' ವಿಲ್ಲದ ನಿಜದ ಮಾತಿಗಾಗಿ ಪರದಾಡುವಂತಾಯಿತು.

ವೈಯಕ್ತಿಕವಾಗಿ ಇನ್ನೂ ಒಂದು ಮಾತನ್ನು ನಾನು ಹೇಳಲೇಬೇಕು. ಹೃದಯದ ಶಸ್ತ್ರ ಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಿದ್ದ, ಮನೆ ಬಿಟ್ಟು ಕದಲಲು ಸ್ವಾಭಾವಿಕವಾಗಿ ಅಂಜುತ್ತಿದ್ದ ನನ್ನನ್ನು ಕರ್ನಾಟಕದ ಮುಖ್ಯ ವಾಹಿನಿಯಲ್ಲಿ ಒಬ್ಬನೆನ್ನುವಂತೆ ಕಂಡು ಇಲ್ಲಿ ತಂದು ನಿಲ್ಲಿಸಿದ ಪರಿಷತ್ತಿನ ಸದಸ್ಯರಿಗೂ ತುಮಕೂರಿನ ಮಹಾಜನತೆಗೂ ನಾನು ಋಣಿಯಾಗಿದ್ದೇನೆ. ಯಾವ ಔಷಧದಿಂದಲೂ ನಾನು ಆರೋಗ್ಯವಂತನೆಂಬ ಸಿಗಲಾರದ, ಭಾವನೆಯು ನಿಮ್ಮ ಪ್ರೀತಿ ನನಗೆ ಕೊಟ್ಟಿದೆ.

೧೯೧೫ರಲ್ಲಿ, ಅಂದರೆ ಅದೆಷ್ಟೋ ವರ್ಷಗಳ ಹಿಂದೆ ಎಂದು ಈಗ ಭಾವಿಸಿಕೊಳ್ಳಬಹುದಾದ ಕಾಲದಲ್ಲಿ, ಶ್ರೀ ಎಚ್.ವಿ. ನಂಜುಂಡಯ್ಯನವರು ಮಾಡಿದ ಮೊದಲನೇ ಭಾಷಣವನ್ನು ಓದುತ್ತಿದ್ದಂತೆ ಅವರು ಸೂಚ್ಯವಾಗಿ ಹೇಳದ ಯಾವ ಹೊಸವಿಷಯವೂ ನನಗೆ ಹೇಳಲೇಬೇಕೆನ್ನಿಸುವಂತೆ ಉಳಿದಿಲ್ಲವೆನ್ನಿಸಿತು. ಆಮೇಲಿನ ಎಲ್ಲ ಅಧ್ಯಕ್ಷರ ಭಾಷಣಗಳನ್ನು ಓದುತ್ತ ಹೋದಂತೆ ಕನ್ನಡದ ಬಹು ದೊಡ್ಡದಾದೊಂದು ಪರಂಪರೆಗೆ ವಿನಯದಲ್ಲಿ ತಲೆಬಾಗುವಂತೆ ಆಯಿತು.

ನಾನು ಈಗಾಡುವ ಕೆಲವು ಮಾತುಗಳು ನನ್ನ ಪೂರ್ವಸೂರಿಗಳು ಸೃಷ್ಟಿಸಿದ ಪರಂಪರೆಗೆ ಸೇರುವಷ್ಟು ಯೋಗ್ಯವಾಗಲಿ ಎಂಬ ಪ್ರಾರ್ಥನಾಭಾವದಲ್ಲಿ ಈಗ ನಿಮ್ಮೆದುರು ನಿಂತಿದ್ದೇನೆ. ನನಗಿಂತ ದೊಡ್ಡ ಶಕ್ತಿಯೊಂದು ನನ್ನ ಮೂಲಕ ಮಾತಾಡಬಹುದು ಎಂಬ ನಿರೀಕ್ಷೆಯಲ್ಲೇ ನಾನು ಬರಹಗಾರನಾಗಿರುವುದು; ಇವತ್ತು ನಿಮ್ಮೆದುರು ನಿಂತು ಮಾತಾಡುತ್ತಿರುವುದೂ ಕೂಡ ಅದೇ ನಿರೀಕ್ಷೆಯಲ್ಲಿ.

ಸಾವಿರ ವರ್ಷಗಳಿಗೂ ಹೆಚ್ಚು ಹಿಂದಿನ ಶ್ರೀವಿಜಯನ 'ಕವಿರಾಜಮಾರ್ಗ'ದ ಕೆಲವು ವಿಚಾರಗಳು ಇವತ್ತಿಗೂ ಹೇಗೆ ಪ್ರಸ್ತುತವಾಗಿ ಉಳಿದಿವೆ ಎಂಬುದನ್ನು ಗೆಳೆಯ ಸುಬ್ಬಣ್ಣನವರ ಬರಹದಿಂದ ತಿಳಿದು ನಾನು ಮುಂದಿನ ಮಾತುಗಳನ್ನಾಡುತ್ತಿದ್ದೇನೆ. (ನೋಡಿ : 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' ಮತ್ತು ಶೆಲ್ಡನ್ ಪೊಲಾಕ್ ಬರೆದಿರುವ ಲೇಖನಗಳು)

ನಮ್ಮ ಜನಪದವು ಕರ್ನಾಟಕ ಪ್ರದೇಶದಲ್ಲಿ ಭವಿಸಿದ್ದು, ಮತ್ತು ಕನ್ನಡತ್ವದಲ್ಲಿ ಭಾವಿಸಿದ್ದು ಎಂಬುದು ಹೆಚ್ಚು ಕಡಿಮೆ ಎಲ್ಲ ಸಮ್ಮೇಳನಾಧ್ಯಕ್ಷರ ಚಿಂತನೆಯ ಹಿಂದಿದೆ ಎನ್ನಬಹುದು. ಮೊದಲೇ ಹೇಳಿಬಿಡಬೇಕೆಂದು ನನಗೆ ಅನ್ನಿಸಿದ ಇನ್ನೊಂದು ವಿಷಯವೆಂದರೆ : ಕವಿರಾಜಮಾರ್ಗಕಾರನ ಕಾಲದಿಂದಲೂ ನಾವು ಈ ಕನ್ನಡತ್ವವನ್ನು ಕಟ್ಟಿಕೊಳ್ಳುತ್ತ ಹೋದದ್ದು ಸಂಘರ್ಷದ ಮಾರ್ಗದಲ್ಲಿ ಅಲ್ಲ; ಅನುಸಂಧಾನದ ಮಾರ್ಗದಲ್ಲಿ ಎಂಬುದು. ಇದು ತುಂಬ ಗಮನಾರ್ಹ ಎಂದುಕೊಂಡಿದ್ದೇನೆ. ಕನ್ನಡಿಗರನ್ನು ಇತರರು ಮೆಚ್ಚುವುದಕ್ಕೂ, ನಮಗೇ ಬೇಸರದಲ್ಲಿ ಕೆಲವೊಮ್ಮೆ ಇದೊಂದು ನಮ್ಮ ದೌರ್ಭಾಗ್ಯವೆಂದು ಅನ್ನಿಸುವುದಕ್ಕೂ ಹಿಂದೆ ಕನ್ನಡದ ತಾಳುವ ಈ ಗುಣವಿದೆ.

ತಮಿಳಿನಂತೆ ಅಲ್ಲದೆ ಕನ್ನಡ ತನ್ನ ಸದ್ಯದ ನುಡಿಗೆ ಅನಗತ್ಯವಾದರೂ ದೇವನಾಗರಿಯ ಎಲ್ಲ ಲಿಪಿಯನ್ನೂ ಉಳಿಸಿಕೊಂಡು ಅನ್ಯಭಾಷೆಗಳ ಮಾತುಗಳನ್ನು ಬಳಸಿಕೊಳ್ಳಲು ಅವಕಾಶ ಮಾಡಿಕೊಂಡಿದ್ದರಲ್ಲೇ ಇದನ್ನು ಕಾಣಬಹುದೆಂದು ಸುಬ್ಬಣ್ಣ ಸೂಚಿಸುತ್ತಾರೆ. ತಮಾಷೆಗೆ ಹೇಳುವುದಾದರೆ ಕನ್ನಡದಲ್ಲಿ ಗಾಂಧಿ, ಅದೇ ಮಹಾತ್ಮನಾದ ಗುಜರಾತಿನ ಗಾಂಧಿಯಾಗಿಯೇ ಇದ್ದಾನು: ಕ್ಲಿಂಟನ್ ಕರ್ಕಶನಾಗದೆ ಬಂದು ಹೋದಾನು. ದೇಜಗೌರಿಂದ ಒಮ್ಮೆ ನಾನು ಕೇಳಿಸಿಕೊಂಡ ಮಾತಿದು; ಕನ್ನಡದ ಉಕಾರ ಕನ್ನಡದ ಕೊಂಬೇ; ಅದನ್ನು ಲಗತ್ತಿಸಿದರೆ ಯಾವ ಶಬ್ದವಾದರೂ ಕನ್ನಡದ ಶಬ್ದವೇ ಆಗಿಬಿಡುತ್ತದೆ. ಚೇರ್ ಚೇರು ಆದಂತೆ ನಾವೀಗ ನಡೆಸುತ್ತಿರುವುದು ಕನ್ನಡದ ಕಾನ್ಫರೆನ್ಸು.

ಸಂಘರ್ಷವಾಗದ ಅನುಸಂಧಾನದಲ್ಲಿ ಕವಿರಾಜಮಾರ್ಗಕಾರ ಸಂಸ್ಕೃತದ ಮಾರ್ಗದ ಜೊತೆ ಕನ್ನಡದ ದೇಸಿ ಶಕ್ತಿಗಳೆಗುಂದದಂತೆಯೂ, ಗೊಂದಲ ಹುಟ್ಟಿಸು

ವಷ್ಟು ಅಸ್ಥಿಯಾಗದಂತೆಯೂ, ಪೂರ್ವಕಾಲದ್ದು ಎಂಬ ಗೀಳಿನಿಂದಾಗಿ ಹಳಗನ್ನಡಕ್ಕೆ ಜೋತುಬೀಳದಂತೆಯೂ, ತನ್ನ ನುಡಿಯನ್ನು ಕಟ್ಟಿಕೊಳ್ಳುತ್ತಾನೆ. ಹೀಗೆ ಕಟ್ಟಿಕೊಳ್ಳುವ ಅನುಸಂಧಾನದ ಹಿಂದಿರುವ ಪ್ರೇರಣೆಯನ್ನು ನಾನು ಸಾತತ್ಯ ಕೆಡದಂತೆ ಆಧುನಿಕವಾಗುವ ಪ್ರೇರಣೆಯೆಂದರೆ ತಪ್ಪಾಗಲಾರದೆಂದು ತಿಳಿದಿದ್ದೇನೆ. ಕನ್ನಡದ ಹಿರಿಯರೆಲ್ಲರೂ, ಬಿಎಂಶ್ರೀ. ಕುವೆಂಪು, ಕಾರಂತ, ಬೇಂದ್ರೆ, ಅಡಿಗ – ಈ ಎಲ್ಲರೂ ಕವಿರಾಜಮಾರ್ಗಕಾರನ ಕೆಲಸವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಹಳಗನ್ನಡ ಸಾಹಿತ್ಯದ ಬಗ್ಗೆ ಪ್ರೀತಿ, ಆದರೆ ಅದರ ಶೈಲಿ, ಭಾಷಾಪ್ರಯೋಗಗಳು ನಮ್ಮ ಕಾಲಕ್ಕೆ ಸಲ್ಲದೆಂಬ ವಿವೇಕ, ಸಂಸ್ಕೃತದ ಬಗ್ಗೆ ಗೌರವ, ಆದರೆ ಈ ಭಾಷೆ ವರ್ತಮಾನ ಕಾಲದ ಜ್ಞಾನದಾಹವನ್ನು ತೀರಿಸಲಾರದೆಂಬ ಎಚ್ಚರ, ಇಂಗ್ಲಿಷ್ ನಮ್ಮ ಬೆಳವಣಿಗೆಗೆ ಅತ್ಯಗತ್ಯವೆಂಬ ನಂಬಿಕೆ, ಆದರೆ ಇಂಗ್ಲಿಷಿನಿಂದ ನಾವು ಪಡೆಯುವ ಲಾಭವೆಲ್ಲವೂ ನಮ್ಮ ಜನಪದಕ್ಕೆ ಕನ್ನಡದ ಮೂಲಕ ಸಿಗಲೇಬೇಕೆಂಬ ಆತಂಕಪೂರ್ಣವಾದ ಛಲ–ಇವು ನಮ್ಮ ಎಲ್ಲ ಹಿರಿಯ ಸಾಹಿತಿಗಳಲ್ಲೂ ಕೆಲಸಮಾಡಿವೆ. ಕರ್ನಾಟಕ ಏಕೀಕರಣದ ಹೋರಾಟದಲ್ಲಿ, ಕನ್ನಡವನ್ನು ಶಿಕ್ಷಣಮಾಧ್ಯಮವನ್ನಾಗಿಯೂ, ಆಡಳಿತ ಭಾಷೆಯನ್ನಾಗಿಯೂ ಮಾಡಬೇಕೆಂಬ ಒತ್ತಾಯದಲ್ಲಿ, ಭಾರತದ ಎಲ್ಲ ಸುಖದುಃಖಗಳಲ್ಲೂ ಪಾಲುದಾರರಾಗಿದ್ದು ತಮ್ಮ ವಿಶಿಷ್ಟತೆಯನ್ನು ಉಳಿಸಿಕೊಳ್ಳಬೇಕೆಂಬ ಆತ್ಮಾಭಿಮಾನದಲ್ಲಿ ಕನ್ನಡದ ಚೈತನ್ಯ ಈ ವರೆಗೂ ತನ್ನ ಕನಸುಗಳನ್ನು ಪ್ರತಿ ಸಮ್ಮೇಳನದಲ್ಲೂ ಪುನರುಚ್ಚರಿಸಿಕೊಂಡು ಬಂದಿದೆ.

ಅನಗತ್ಯ ಸಂಘರ್ಷದ ಹುಂಬತನಕ್ಕೆ ಎಡೆಗೊಡದಂತೆ, ಅಗತ್ಯವಾದರೆ ಸಂಘರ್ಷಕ್ಕೆ ಹಿಂಜರಿಯದಂತೆ ಕೆಲಸಮಾಡುವ ಕನ್ನಡದ ಚೈತನ್ಯದ ಹಿಂದೆ ಇರುವ ಹಸಿವುಗಳಲ್ಲಿ ಮೂರನ್ನು ಮುಖ್ಯವೆಂದು ನಾನು ಭಾವಿಸುತ್ತೇನೆ. ಇದರಲ್ಲಿ ಹೊಸಮಾತೇನು ಇಲ್ಲ. ಪೂರ್ವಸೂರಿಗಳ ಎಲ್ಲ ಮಾತುಗಳನ್ನೂ ಸಂಗ್ರಹಿಸುವಾಗ ನನಗೆ ಹೊಳೆದದ್ದು ಇದು.

೧. ಸಮಾನತೆಯ ಹಸಿವು. ನಮ್ಮ ದೇಶ ಉಳಿದ ದೇಶಗಳಿಗೆ ಸಮಾನವಾಗಿ ತಲೆಯೆತ್ತಿ ಬದುಕಬೇಕೆಂಬ ಹಸಿವುಮಾತ್ರವಲ್ಲದೆ, ನಮ್ಮ ಜನಪದದಲ್ಲಿ ಹಿಂದುಳಿದವರು ನಾಗರಿಕತೆಯ ಸವಲತ್ತುಗಳನ್ನು ಗಳಿಸಿಕೊಳ್ಳಬೇಕೆಂಬ ಹಸಿವು; ದಲಿತರಲ್ಲೂ. ಸ್ತ್ರೀಯರಲ್ಲೂ ಹುಟ್ಟಿರುವ ಸ್ವಾಭಿಮಾನದ ಹಸಿವು. ಇವೇ ಬಂಡಾಯ, ದಲಿತ ಇತ್ಯಾದಿ ಈಚಿನ ಸಾಹಿತ್ಯ ಚಳವಳಿಗಳಲ್ಲಿ ಕಾಣಿಸುವ ಹಸಿವು ಕೂಡ.

ಮುಂದುವರಿಯುವುದು

ಮಹಾತ್ಮರ ಮರಣದ ಸಂದೇಶವನ್ನು ಭಾರತ ಎಂದು ತಿಳಿಯುವುದೋ?

– ಸುರೇಂದ್ರ ಕೌಲಗಿ

ಹಿಂದಿನ ಸಂಚಿಕೆಯಿಂದ ಮುಂದುವರಿದುದು

ಮಹಾತ್ಮರು ಪ್ರತಿಯೊಬ್ಬ ವ್ಯಕ್ತಿಯ ಏಳಿಗೆಯನ್ನು ಬಯಸಿದ್ದರು. ಈ ಏಳಿಗೆ ಆಯಾ ವ್ಯಕ್ತಿಯ ಪ್ರಯತ್ನದಿಂದಲೇ ನಡೆಯಬೇಕು. ಹೊರಗಿನ ಶಕ್ತಿಗಳಿಂದ ಮನುಷ್ಯನನ್ನು ತಿದ್ದುವುದು ಸಾಧ್ಯವಿಲ್ಲ. ಆದ್ದರಿಂದಲೇ ಮಹಾತ್ಮರು ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗ ಅವರನ್ನು ಅಲ್ಲಿಯ ಕಾನೂನಿನ ಚೌಕಟ್ಟಿಗೆ ಒಳಪಡಿಸಿ ಅವರನ್ನು 'ದಾರಿಗೆ' ತರಲು ಅಲ್ಲಿಯ ಸರ್ಕಾರ ಪ್ರಯತ್ನಿಸಿದಾಗ ಅವರು ಅದನ್ನು ಪ್ರತಿಭಟಿದಸಿರು. ಅಲ್ಲಿಯ ಕೋರ್ಟಿನಲ್ಲಿ ಪೇಟ ಧರಿಸಿ ಬರಬಾರದೆಂದು ಅವರಿಗೆ ಸೂಚಿಸಿದಾಗ ಅದನ್ನು ಪ್ರತಿಭಟಿಸಿದರು, ಭಾರತೀಯರು ಹೆಬ್ಬಟ್ಟಿನ ಗುರುತನ್ನು ಕೊಡಬೇಕೆಂದಾಗ ಪ್ರತಿಭಟಿಸಿದರು, ಭಾರತೀಯರಿಗೆ ಮತದಾನದ ಹಕ್ಕು ಇಲ್ಲ ಎಂದು ಕಾನೂನು ಮಾಡಿದಾಗ ಪ್ರತಿಭಟಿಸಿದರು. ಬಿಳಿಯರು ಪ್ರಯಾಣ ಮಾಡುವ ಡಬ್ಬಿಯಲ್ಲಿ ಕರಿಯರು ಕುಳಿತುಕೊಳ್ಳ ಕೂಡದೆಂದು ತಿಳಿಸಿವಾಗಲೂ ಪ್ರತಿಭಟಿಸಿದರು. ಭಾರತದಲ್ಲಿ ಇಂಗ್ಲೀಷರು ಅನೇಕ ಬಗೆಯ ದಬ್ಬಾಳಿಕೆಯ ಕಾನೂನುಗಳನ್ನು ಜಾರಿಗೆ ತಂದಾಗ ಅವುಗಳ ವಿರುದ್ಧ ಸವಿನಯ ವಿರೋಧ ಚಳುವಳಿಯನ್ನೂ, ಅಸಹಕಾರ ಚಳುವಳಿಯನ್ನೂ ಪ್ರಾರಂಭಿಸಿದರು.

ಜನ ಸಾಮಾನ್ಯರು ಉಪಯೋಗಿಸುವ ನಿಸರ್ಗದತ್ತ ಉಪ್ಪಿನಮೇಲೆ ಸರ್ಕಾರವು ಕರವನ್ನು ವಿಧಿಸಿದಾಗ ಅದರ ವಿರುದ್ಧ ಸತ್ಯಾಗ್ರಹ ಆಚರಿಸಿದರು, ದಲಿತರ ಮೇಲೆ ಸವರ್ಣಿಯರಿಂದ ಆಗುತ್ತಿದ್ದ ಸಾಮಾಜಿಕ ಅನ್ಯಾಯಗಳ ವಿರುದ್ಧ ಉಪವಾಸ ಮಾಡಿದರು, ಕೋಮು ಗಲಭೆಗಳ ಹಿಂದೆ ಇದ್ದ ದೌರ್ಜನ್ಯವನ್ನು ತಡೆಯುವುದಕ್ಕಾಗಿ ಆಮರಣ ಉಪವಾಸ ಕೈಗೊಂಡರು. ಈ ಎಲ್ಲ ಉದಾಹರಣೆಗಳ ಮೂಲಕ ವ್ಯಕ್ತಿಯನ್ನಾಗಲೀ, ಸಮಾಜವನ್ನಾಗಲೀ ಪರಿವರ್ತಿಸಬೇಕಾದರೆ ಬಲಾತ್ಕಾರ ಪ್ರಯೋಜನವಾಗುವುದಿಲ್ಲ ಎಂಬ ಸತ್ಯವನ್ನು ಪ್ರಪಂಚಕ್ಕೆ ಮಹಾತ್ಮರು ತೋರಿಸಿದ್ದಾರೆ. ಪರಿವರ್ತನೆಯ ದಾರಿ ಬೇರೆಯೆ ಇದೆ. ಆ ದಾರಿಯು ಪ್ರತಿಯೊಬ್ಬ ವ್ಯಕ್ತಿಯ ಸ್ವಂತ ವಿಕಾಸದ ದಾರಿಯಾಗಿದೆ. ಅದಕ್ಕಾಗಿ ಮಹಾತ್ಮರು ಪ್ರತಿಯೊಬ್ಬ ವ್ಯಕ್ತಿಯೂ ಪಾಲಿಸಬೇಕಾದ ಹನ್ನೊಂದು ವ್ರತಗಳನ್ನು ಸೂಚಿಸಿದ್ದರು. ಅಹಿಂಸೆ ಅಸ್ತೇಯ. ಬ್ರಹ್ಮಚರ್ಯ, ಅಸಂಗ್ರಹ, ಸರ್ವ ಧರ್ಮ ಸಮಾನತೆ, ಸ್ವದೇಶಿ, ಸ್ಪರ್ಶಭಾವನೆ – ಈ ಪ್ರಕಾರದ ಹನ್ನೊಂದು

ವ್ರತಗಳನ್ನು ಗಾಂಧೀಜಿ "ಆಶ್ರಮ ವ್ರತಗಳೆಂದು" ಕರೆದರು. ಈ ವ್ರತಗಳನ್ನು ಬ್ರಹ್ಮಚರ್ಯ ಆಶ್ರಮವಿರಲಿ, ಗೃಹಸ್ಥಾಶ್ರಮವಿರಲಿ, ವಾನಪ್ರಸ್ಥಾಶ್ರಮವಿರಲಿ, ಸನ್ಯಾಸಾಶ್ರಮವಿರಲಿ ಪಾಲಿಸಬೇಕೆಂದು ಮಹಾತ್ಮರು ಬಯಸಿದರು. ಈ ವ್ರತಗಳು ಈಗ ನಮ್ಮ ದೇಶಕ್ಕೆ ಬಹಳ ಅಗತ್ಯವಾಗಿ ಬೇಕಾಗಿವೆ. ಈ ವ್ರತಗಳ ಪರಿಚಯವನ್ನು ಇಂದಿನ ಎಳೆಯರಿಗೆ, ಯುವಕರಿಗೆ ಮಾಡಿಕೊಡಬೇಕಾದುದು ಹಿರಿಯರ ಕರ್ತವ್ಯ. ಕೊನೆಯದಾಗಿ ಮಹಾತ್ಮರು ರಾಜಕಾರಣವನ್ನು ಅಧ್ಯಾತ್ಮೀಕಗೊಳಿಸಬೇಕೆಂದು ಬಯಸಿದ್ದರು. ಆ ಉದ್ದೇಶ್ಯದಿಂದಲೇ ತಾವು ರಾಜಕಾರಣವನ್ನು ಪ್ರವೇಶಿಸಿರುವುದಾಗಿ ಹೇಳಿದ್ದರು. ಆದರೆ ಇಂದು ಭ್ರಷ್ಟಾಚಾರ, ಸ್ವಾರ್ಥ, ದ್ವೇಷ, ಪೈಪೋಟಿಯಂಥ ಅನೈತಿಕ ಸಂಗತಿಗಳು ರಾಜಕಾರಣದಲ್ಲಿ ಮನೆ ಮಾಡಿವೆ. ಆದ್ದರಿಂದ ಇಂದು ನಮ್ಮ ದೇಶ ಅಧೋಗತಿಯತ್ತ ಹೋಗುತ್ತಿದೆ. ಈ ಸಂದರ್ಭದಲ್ಲಿ ಗಾಂಧೀಜಿಯವರ ರಾಜಕಾರಣದ ಅಧ್ಯಾತ್ಮೀಕರಣದ ಮಾತು ಎಷ್ಟು ಪ್ರಾಸಂಗಿಕವಾಗಿದೆ ಎಂದು ಗೊತ್ತಾಗುತ್ತದೆ ಮಹಾತ್ಮರು ಎಲ್ಲವನ್ನೂ ತಮ್ಮ ಪ್ರತ್ಯಕ್ಷ ಆಚರಣೆಯ ಮೂಲಕ ತಮ್ಮ ಸಂದೇಶವನ್ನು ಜಗತ್ತಿಗೆ ಕೊಟ್ಟಿದ್ದಾರೆ. "ನನ್ನಂಥವರು ಸಾವಿರ ಜನ ಸಾಯಲಿ ಆದರೆ ಸತ್ಯ ಮಾತ್ರ ಉಳಿಯಲಿ" ಎಂದು ಹೇಳಿ ಹೋಗಿದ್ದಾರೆ. ಇದೇ ಮಹಾತ್ಮರ ಮರಣದ ಸಂದೇಶ. ಈ ಸಂದೇಶವನ್ನೂ ಭಾರತ ಬೇಗ, ಈಗಲೇ ತಿಳಿಯಬೇಕು. ಕಾಲ ನಮ್ಮ ಕೈಯಲ್ಲಿಲ್ಲ. ★

ಲೋಕ ಶಂಕರ

ಸಾದರ ಸ್ವೀಕಾರ

ಲೇಖಕರು : ವಿದ್ವಾನ್ ಉಮಾಕಾಂತ್ ಭಟ್

ಪ್ರಕಾಶಕರು : ಛಂದಸ್ಪತೀ ಪ್ರಕಾಶನ

ಕಲ್ಯಾಣಿ ಬೀದಿ, ಮೇಲುಕೋಟೆ

ಪುಟಗಳು ೨೪ : ಬೆಲೆ ೧೦/-ರೂ

ಹಿಂದುಗಳೇ ಮುಸ್ಲೀಂರೇ ನರಮೇಧ ಮೊದಲು ನಿಲ್ಲಿಸಿ.
ಮಾನವೀಯತೆ ಮೊದಲು. ತದನಂತರ ಮಂದಿರ್ – ಮಸ್ಜೀದ್

– ಸುರೇಂದ್ರ ಕೌಲಗಿ

ಭಾರತ ದೇಶದಂಥ ಧರ್ಮನಿರಪೇಕ್ಷ (ಸೆಕ್ಯೂಲರ್) ದೇಶದಲ್ಲಿ ಧರ್ಮಗಳ ಹೆಸರಿನಲ್ಲಿ ಮಾನವ ಹತ್ಯಾಕಾಂಡ ನಡೆಯುವುದು ದುರ್ದೈವದ ಸಂಗತಿ.

ಇಂಥ ಅಮಾನುಷ ಘಟನೆಗಳಿಗೆ ಯಾವ ಧರ್ಮದವರೇ ಕಾರಣರಿರಲಿ ಅವರು ತಮ್ಮ ಧರ್ಮಕ್ಕೇ ದ್ರೋಹಬಗೆಯುತ್ತಿದ್ದಾರೆ; ಆತ್ಮ ವಂಚನೆ ಮಾಡಿ ಕೊಳ್ಳುತ್ತಿದ್ದಾರೆ ಮತ್ತು ಮೂಲಭೂತವಾಗಿ ಮಾನವ ಧರ್ಮಕ್ಕೇ ದ್ರೋಹ ಬಗೆಯುತ್ತಿದ್ದಾರೆ ಎಂಬುದಾಗಿ ಅವರು ಅರ್ಥಮಾಡಿ ಕೊಳ್ಳಬೇಕು.

ಏಕೆಂದರೆ ನಮ್ಮ ಸಂವಿಧಾನವು ದೇಶದಲ್ಲಿರುವ ಎಲ್ಲ ಧರ್ಮಗಳ ಅನು ಯಾಯಿಗಳಿಗೆ ತಮ್ಮ-ತಮ್ಮ ಧರ್ಮಗಳ ರೀತಿನೀತಿಗಳನ್ನು ಬೇರೆ ಧರ್ಮಿ ಯರ ಆಚಾರ – ವಿಚಾರಕ್ಕೆ ಧಕ್ಕೆಯಾಗದಂತೆ ನಡೆಸಿಕೊಂಡು ಹೋಗಲು ಸ್ವಾತಂತ್ರ್ಯವನ್ನೂ, ಅವಕಾಶವನ್ನೂ ಕೊಟ್ಟಿದೆ. ಹೀಗಿರುವಾಗ ತಮ್ಮ ಧರ್ಮ ಗಳ ಆಚರಣೆಯಲ್ಲಿ ತೊಂದರೆಯುಂಟಾದರೆ ನ್ಯಾಯಸ್ಥಾನಕ್ಕೆ ಹೋಗಿ ಆ ಸಮಸ್ಯೆಯನ್ನು ಪರಿಹರಿಸಿಕೊಳ್ಳ ಬಹುದಾಗಿದೆ. ಹೀಗೆ ಸಂವಿಧಾನದತ್ತ ಮಾರ್ಗವೂ ಇರುವಾಗ ಪರಸ್ಪರ ಹಿಂಸಾಚಾರಕ್ಕೆ ಇಳಿಯುವುದು ಅಕ್ಷಮ್ಯ ಅಪರಾಧವಾಗು ತ್ತದೆ. ಅಲ್ಲದೆ, ಈಗ ನಮ್ಮ ಸರ್ಕಾರ ಪ್ರಜಾಸತ್ತಾತ್ಮಕ ಸರ್ಕಾರ. ಪ್ರಜಾ ತಾಂತ್ರಿಕ ಪ್ರಯತ್ನಗಳ ಮೂಲಕವೂ ಸಮಸ್ಯೆಗಳನ್ನು ಬಗೆ ಹರಿಸಲು ಸಾಧ್ಯ ವಾಗುತ್ತದೆ.

ನಮ್ಮ ದೇಶವನ್ನು ಪರಕೀಯರು ಆಳುತ್ತಿದ್ದಾಗ. ತಮ್ಮ ಕೋಮಿನ ಪರವಾಗಿ ಅವರು ತೀರ್ಮಾನಕೈಗೊಳ್ಳುವಂತೆ ಒತ್ತಡತರುವುದಕ್ಕಾಗಿ ಹಿಂಸಾಚಾರಕ್ಕೆ ಇಳಿಯುವ ಕಾಲವೊಂದಿತ್ತು. ಆದರೆ ಈಗ ನಾವು ನಮ್ಮದೇ ಆದ ಸರ್ಕಾರ ವನ್ನು ಹೊಂದಿದ್ದೇವೆ. ಬದಲಾದ ಈ ಪರಿಸ್ಥಿತಿಯಲ್ಲಿ ಅರ್ಧ ಶತಮಾನ ಹಿಂದಿನ ಕಾಲದ ರೀತಿಯಲ್ಲಿಯೇ ನಡೆದುಕೊಳ್ಳುವುದು ಅಜ್ಞಾನದ ಪರಮಾವಧಿ.

ಇಂದು ಮಂದಿರ – ಮಸೀದಿಗಳ ನಿರ್ಮಾಣದ ಹಿಂದೆ ಯಾವ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಜೀವನದ ವಿಚಾರಗಳೂ ಇಲ್ಲ. ಈಗ ಅವುಗಳ ಹಿಂದೆ ಕೆಟ್ಟ ರಾಜಕಾರಣ ಮತ್ತು ವಿದ್ವೇಷಗಳು ಕೆಲಸ ಮಾಡುತ್ತಿವೆ. ದೇಶ ವಿಭಾಗವಾದಾಗಿನಿಂದಲೇ ಮಂದಿರ ಮತ್ತು ಮಸೀದಿಗಳ ಜಗಳದ ಬೀಜಗಳು ಮೊಳೆತಿವೆ. ಈ ಜಗಳ ಪ್ರಾರಂಭವಾಗಿ ೫೦ ವರ್ಷಗಳಾದವು. ಸಾವಿರಾರು ಜನ ಅಮಾಯಕರು ಪ್ರಾಣ ಕಳೆದುಕೊಂಡರು. ಇಷ್ಟೇ ಅಲ್ಲ ಆದರೂ ಎರಡೂ ಧರ್ಮಗಳ ಅನುಯಾಯಿಗಳಲ್ಲಿ ಸನ್ಮತಿ ಉಂಟಾಗಿಲ್ಲ. ಎರಡೂ

ಧರ್ಮಗಳ ನಾಯಕರು ತಮ್ಮ ಅನುಯಾಯಿಗಳಿಗೆ ಧರ್ಮದ ನಿಜವಾದ ಅರ್ಥ ತಿಳಿಸಲು ವಿಫಲರಾಗಿದ್ದಾರೆ. ಈಗ ಈ ವಿವಾದ ನ್ಯಾಯಾಂಗದ ಮುಂದೆ ಇದೆ. ಈ ವಿವಾದದ ಕಾರ್ಯಕಲಾಪಗಳನ್ನು ಪ್ರತಿದಿನವೂ ನಡೆಸಿಕೊಂಡು ಹೋಗಲು ನ್ಯಾಯಸ್ಥಾನಗಳ ಒಪ್ಪಿಕೊಂಡಿವೆ. ಇನ್ನು ಎರಡು ಅಥವಾ ಮೂರು ವರ್ಷಗಳ ಒಳಗಾಗಿ ಈ ವಿವಾದ ಇತ್ಯರ್ಥಗೊಳ್ಳುವ ಸಾಧ್ಯತೆ ಇದೆ. ಕೋರ್ಟ್ ತೀರ್ಪು ಬರುವವರೆಗೆ ಎರಡೂ ಧರ್ಮಗಳ ಅನುಯಾಯಿಗಳು ಮತ್ತು ರಾಜಕೀಯ ಪಕ್ಷಗಳು ತಟಸ್ಥರಾಗಿ ಇರಬೇಕಾದುದು ಮುಖ್ಯ. ಅಲ್ಲದೆ, ಈ ಮಧ್ಯ ಎರಡೂ ಧರ್ಮಗಳ ಜನರ ನಡುವೆ ವೈಚಾರಿಕ ಮೈತ್ರಿ ಸಾಂಸ್ಕೃತಿಕ ಮೈತ್ರಿ ಸಂಬಂಧಗಳು ಏರ್ಪಡುವಂತೆಯೂ ಪ್ರಯತ್ನ ನಡೆಯಬೇಕು. ಅಯೋಧ್ಯೆಯಲ್ಲಿಯ ವಿವಾದಕ್ಕೂ, ಕಾಶ್ಮೀರ್ ವಿವಾದಕ್ಕೂ ಗಂಟು ಹಾಕಬಾರದು. ಮುಸ್ಲಿಂರ ಮೇಲೆಯೂ ಹೆಚ್ಚಿನ ಜವಾಬ್ದಾರಿಯಿದೆ. ಅವರು ಭಾರತಕ್ಕೇನು ಹೊಸಬರಲ್ಲ ಅವರೇ ಸ್ವತಃ ಸುಮಾರು ೬೦೦ ವರ್ಷ ಭಾರತವನ್ನು ಆಳಿದ್ದಾರೆ. ಇಲ್ಲಿಯ ನೆಲ – ಜಲ ವಾಯುವಿನೊಂದಿಗೆ ಸೇರಿದ್ದಾರೆ. ಆದ್ದರಿಂದ ಅವರು ಬಹುಸಂಖ್ಯಾತರಾಗಿರುವ ಹಿಂದುಗಳ ಭಾವನೆಯನ್ನು, ಅವರ ಸಂಸ್ಕೃತಿಯನ್ನು ಅರ್ಥ ಮಾಡಿಕೊಂಡು ಸಹಕಾರ ಹಾಗು ಐಕ್ಯತ್ಯಯೊಂದಿಗೆ ಜೀವನ ಮಾಡುವುದನ್ನು ಕಲಿಯಬೇಕು. ಮುಸ್ಲೀರು ಬೇರೆ ಯಾವ ದೇಶಕ್ಕೂ ಹೋಗಲು ಸಾಧ್ಯವಿಲ್ಲ; ಅದೇ ರೀತಿ ಹಿಂದುಗಳೂ ಸಹ ಭಾರತ ಬಿಟ್ಟು ಬೇರೆ ದೇಶಕ್ಕೆ ಹೋಗಲು ಸಾಧ್ಯವಿಲ್ಲ. ಆದ್ದರಿಂದ ಎರಡೂ ಧರ್ಮಗಳ ಜನರ ಹಿತ ಮತ್ತು ಸುಖ ಪರಸ್ಪರದಲ್ಲಿಯ ಅನ್ಯೋನ್ಯತೆಯಲ್ಲಿಯೇ ಇದೆ ಎಂಬುದನ್ನು ಎರಡೂ ಕಡೆಯವರು ತಿಳಿದುಕೊಳ್ಳಬೇಕು. ಈ ರಾಜಮಾರ್ಗ ಬಿಟ್ಟು ಬೇರೆ ಯಾವುದೇ ಮಾರ್ಗವನ್ನು ಹಿಡಿಯಲು ಯಾರೇ ಪ್ರಯತ್ನಿಸಲಿ ಅದು ಅವ್ಯವ್ಯಹಾರಿಕವೂ, ಅಸಾಧ್ಯವೂ ಆದ ಮಾರ್ಗವಾಗುತ್ತದೆ. ಆದ್ದರಿಂದ ಎರಡೂ ಧರ್ಮಗಳ ಮುಖಂಡರು ಮಾತುಕತೆಗಳ ಮೂಲಕ. ಸಂಧಾನದ ಮೂಲಕ ಅಯೋಧ್ಯೆಯ ಸಮಸ್ಯೆಯನ್ನು ಬಗೆ ಹರಿಸಬೇಕು. ಕೋಮು ಸೌಹಾರ್ದತೆಯ ಮೂಲಕವೇ ಎರಡೂ ಧರ್ಮಗಳ ಏಳಿಗೆಯಿದೆಯೆಂದು ಇಬ್ಬರೂ ಭಾವಿಸುವುದಾದರೆ - ಮುಸ್ಲೀಂರು ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಲು ಒಪ್ಪಬೇಕು ಮತ್ತು ರಾಮಮಂದಿರದ ಬಳಿ ಮಸೀದಿಯನ್ನು ಕಟ್ಟಲು ಹಿಂದೂಗಳು ಒಪ್ಪಬೇಕು ಇಂಥ ಒಪ್ಪಂದಕ್ಕೆ ಎರಡೂ ಧರ್ಮಿಗಳು ಬಂದರೆ ಇಡೀ ಭಾರತ ದೇಶ ಪ್ರಪಂಚದಲ್ಲಿಯೇ ಅತ್ಯಂತ ಮುಂದುವರಿದ ಹಾಗೂ ಬಲಾಢ್ಯವಾದ ದೇಶವಾಗುವುದರಲ್ಲಿ ಸಂದೇಹವಿಲ್ಲ. ಎರಡೂ ಧರ್ಮಿಯರನ್ನು ಸಮಾನವಾಗಿ ಪ್ರೀತಿಸಿದ ಮಹಾತ್ಮಾ ಗಾಂಧೀಯವರ ಕನಸಿನ ಭಾರತವೂ ನೆನಸಾದೀತು. ★

KA-SKMND-470/-2000. ಕರದ-ಅಂಚೆ

Regd No. KAR/KAN/2000/3820

Vol 2 Issue 8,

Janapada Vichara – Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, (Regd) Melkote. Dist – Mandya 571 431.

Phone : 0823/648754